ಜನಮನದ ದನಿ

# ಪ್ರಜೋದಯ


ಸಂಪಾದಕ : ಜೆ.ಆರ್. ಕೆಂಚೇಗೌಡ

12 ಮೇ 2026 ಮಂಗಳವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 62 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ರಾಯ್‌ಪುರದಲ್ಲಿ ಭಾನುವಾರ ಮುಂಬೈ ಇಂಡಿಯನ್ಸ್ ವಿರುದ್ಧ ನಡೆದ ಐಪಿಎಲ್ ಪಂದ್ಯದಲ್ಲಿ ರೋಚಕ ಗೆಲುವು ಸಾಧಿಸಿದ ಆರ್‌ಸಿಬಿ ತಂಡದ ನಾಯಕ ನಾವು ಈ ಪಂದ್ಯವನ್ನು ಗೆಲ್ಲಲು ಅರ್ಹರು ಎಂದು ನಾವು ಭಾವಿಸುವುದಿಲ್ಲವೆಂದು ಹೇಳಿದ್ದಾರೆ.






ಸೋಮನಾಥದಿಂದ ಸಿಂಧೂರದ ವರೆಗೆ ಭಾರತ ಪುನರುತ್ಥಾನ » 2


ಮಿತ ವ್ಯಯಕ್ಕಾಗಿ ಪ್ರಧಾನಿ ಮೋದಿ ಸಲಹೆ ಸ್ವಾಗತಿಸಿ » 3


ತಂಬಾಕು ಮಾರುಕಟ್ಟೆಯಲ್ಲಿ ಬೆಲೆ ಕುಸಿತದ ಬಿಸಿ » 4


# ವಿಶ್ವಾಸದ್ರೋಹಿ ಪಕ್ಷದ ನಾಯಕ ಮೋದಿ

## ಕಾಂಗ್ರೆಸ್ ವಿರುದ್ಧದ ಆರೋಪಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು

• ಪ್ರಜೋದಯ ವರದಿ

**ಬೆಂಗಳೂರು:** ವಿಶ್ವಾಸದ್ರೋಹಿ ಪಕ್ಷದ ನಾಯಕರಾದ ನರೇಂದ್ರ ಮೋದಿ ಅವರು ಕಾಂಗ್ರೆಸ್ ಪಕ್ಷದ ವಿರುದ್ಧ ಆರೋಪ ಮಾಡುವ ಮೊದಲು ತಮ್ಮ ಪಕ್ಷದ ವಿಶ್ವಾಸದ್ರೋಹದ ಚರಿತ್ರೆಯನ್ನು ಒಮ್ಮೆ ನೆನಪು ಮಾಡಿಕೊಳ್ಳಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿರುಗೇಟು ನೀಡಿದ್ದಾರೆ.

ಪ್ರಧಾನಿ ಮಾಡಿದ್ದ ಆರೋಪಗಳಿಗೆ ಪ್ರತಿಕ್ರಿಯಿಸಿರುವ ಅವರು, ಮೋದಿ ಅವರು ತಮ್ಮ ಪಕ್ಷದ ವಿಶ್ವಾಸ ದ್ರೋಹದ ಚರಿತ್ರೆಯನ್ನು ಒಮ್ಮೆ ನೆನಪು ಮಾಡಿಕೊಂಡಿದ್ದರೆ ಅವರು ಖಂಡಿತ ಕಾಂಗ್ರೆಸ್ ಪಕ್ಷದ ಮೇಲೆ ಆರೋಪವನ್ನು ಮಾಡುತ್ತಿರಲಿಲ್ಲ. ಬಿಎಸ್‌ಪಿ, ಟಿಎಂಸಿ, ಡಿಎಂಕೆ, ಎಐಡಿಎಂಕೆ, ಪಿಡಿಪಿ, ಶಿವಸೇನಾ, ಅಕಾಲಿ ದಳ, ನ್ಯಾಷನಲ್ ಕಾನ್ಪರೆನ್ಸ್ ಸೇರಿ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡು 'ವಿಶ್ವಾಸದ್ರೋಹಕ್ಕೊಳಗಾದ' ಪ್ರಾದೇಶಿಕ ಪಕ್ಷಗಳ ಪಟ್ಟಿ ಬೆಳೆಯುತ್ತಲೇ ಇದೆ. ಇನ್ನೊಂದೆಡೆ ಕಾಂಗ್ರೆಸ್ ಮತ್ತು ಇತರೆ ಪಕ್ಷಗಳ ನಾಯಕರನ್ನು ಬ್ಲಾಕ್‌ಮೇಲ್ ಮಾಡಿ ಅವರು ತಮ್ಮ ಪಕ್ಷಗಳಿಗೆ ವಿಶ್ವಾಸ ದ್ರೋಹ ಎಸಗುವಂತೆ ಮಾಡಿದ ಪಟ್ಟಿಯೂ ದೊಡ್ಡದಿದೆ ಎಂದು ಕುಟುಕಿದ್ದಾರೆ.



ಪಕ್ಷವೇ ಅಮಾನತುಗೊಳಿಸಿದ್ದ ನಾಯಕರ ಕಾಲಿಗೆ ಬಿದ್ದು ಕರೆತಂದು ಚುನಾವಣಾ ಪ್ರಚಾರ ಮಾಡುವಷ್ಟರ ಮಟ್ಟಿಗೆ ರಾಜ್ಯದ ಬಿಜೆಪಿಯ ಸ್ಥಿತಿ ಕೆಟ್ಟು ಹೋಗಿದೆ. ಇಂತಹವರು ಕಾಂಗ್ರೆಸ್ ಪಕ್ಷಕ್ಕೆ ಬುದ್ಧಿ ಹೇಳಲು ಹೊರಟಿದ್ದಾರೆ. ಪ್ರಧಾನಿಯವರೇ ಮೊದಲು ಕುಸಿದು ಬೀಳುತ್ತಿರುವ ನಿಮ್ಮ ಮನೆಯನ್ನು ಭದ್ರಮಾಡಿಕೊಳ್ಳಿ, ನಂತರ ನಮ್ಮ ಬಗ್ಗೆ ಮಾತನಾಡಲಿ ಎಂದು ಆಕ್ರೋಶ ಹೊರಹಾಕಿದ್ದಾರೆ.

ಪಂಡಿತ್ ಜವಾಹರಲಾಲ್ ನೆಹರೂ, ಇಂದಿರಾಗಾಂಧಿ, ಅಟಲ್ ಬಿಹಾರಿ ವಾಜಪೇಯಿ ಅವರೂ ಸೇರಿ ದೇಶದ ಪ್ರಧಾನಮಂತ್ರಿಯಾದವರು ಎಂದೂ ಕೆಟ್ಟ ರಾಜಕಾರಣಿಗಳ ರೀತಿ ಬೀದಿ ಭಾಷಣ ಮಾಡಿ ವಿರೋಧ ಪಕ್ಷಗಳನ್ನು ಹಳಿಯಲು ಹೋಗಿಲ್ಲ. ಅವರೆಲ್ಲರೂ ಕಾಪಾಡಿಕೊಂಡು ಬಂದಿದ್ದ ಪ್ರಧಾನಿ ಕುರ್ಚಿಯ ಘನತೆ, ಗಾಂಭಿರ್ಯ ಮತ್ತು ಔಚಿತ್ಯವನ್ನು ಮೋದಿಯವರು ತಮ್ಮ ಸುಳ್ಳು, ಕೀಳು ಅಭಿರುಚಿ ಮತ್ತು ದ್ವೇಷಾಸೂಯೆಗಳನ್ನು ವ್ಯಕ್ತಪಡಿಸುವ ಭಾಷಣಗಳ ಮೂಲಕ ಮಣ್ಣುಪಾಲು ಮಾಡುತ್ತಿದ್ದಾರೆ. ಬೆಂಗಳೂರಿಗೆ ಬಂದಿದ್ದ ಮೋದಿ ಅವರು ಇನ್ನೂ ಪಂಚ ರಾಜ್ಯಗಳ ಚುನಾವಣಾ ರ‍್ಯಾಲಿಗಳ ಗುಂಗಿನಲ್ಲಿಯೇ ಇದ್ದಂತೆ ಕಂಡರು ಎಂದು ಕುಟುಕಿದ್ದಾರೆ.

**ಕರ್ನಾಟಕದ ಆರ್ಥಿಕ ಪರಿಸ್ಥಿತಿ ಸುಭದ್ರ**

ಕಾಂಗ್ರೆಸ್ ಆಡಳಿತದಲ್ಲಿ ಕರ್ನಾಟಕದ ಆರ್ಥಿಕ ಪರಿಸ್ಥಿತಿ ಸುಭದ್ರವಾಗಿದೆ. ದೇಶದ ತಲಾ ಆದಾಯ 2.11 ಲಕ್ಷ ಆಗಿದ್ದರೆ ಕರ್ನಾಟಕದ್ದು 4.33 ಲಕ್ಷ. ದೇಶದ ಜಿಡಿಪಿ ಬೆಳವಣಿಗೆಯ ದರ ಶೇಕಡ 7.4 ಆಗಿದ್ದರೆ, ಕರ್ನಾಟಕದ್ದು ಶೇಕಡ 8.1 ಆಗಿದೆ. ದೇಶದ ಜಿಡಿಪಿಯಲ್ಲಿ ಕರ್ನಾಟಕದ ಪಾಲು ಶೇಕಡ 9.19 ಆಗಿದೆ. ಜಿಎಸ್‌ಟಿ ಸಂಗ್ರಹದಲ್ಲಿ ಮಹಾರಾಷ್ಟ್ರದ ನಂತರ ಕರ್ನಾಟಕದ್ದೇ ಅತ್ಯಧಿಕ ಪಾಲು. ಕರ್ನಾಟಕವು ಅಭಿವೃದ್ಧಿಯ ಪಥದಲ್ಲಿ ವೇಗದಲ್ಲಿ ಸಾಗುತ್ತಿರುವುದಕ್ಕೆ ಇನ್ನೇನು ಪುರಾವೆ ಬೇಕು, ಮುಂದಿನ ಬಾರಿ ನಮ್ಮ ಸರ್ಕಾರದ ವಿರುದ್ಧ ಆರೋಪ ಮಾಡುವಾಗ ಸ್ವಲ್ಪ ಪೂರ್ವ ತಯಾರಿ ಮಾಡಿಕೊಂಡು ಬನ್ನಿ. ದೇಶದ ಪ್ರಧಾನಿಯವರ ಬಾಯಲ್ಲಿ ಸುಳ್ಳು ಹೇಳಿಕೆಗಳು ಶೋಭೆಯಲ್ಲ ಎಂದು ಹೇಳಿದರು.

### ಪ್ರಧಾನಿ ಮಿತಬಳಕೆ ಹೇಳಿಕೆಗೆ ಸಿಎಂ ವ್ಯಂಗ್ಯ

ಭಾರತದ ಅಭಿವೃದ್ಧಿ ನಾಗಾಲೋಟದಿಂದ ಮುಂದೋಡುತ್ತಿದೆ ಎಂದು ಬೀಗಿದ್ದ ಮತ್ತು ದೇಶದ ಬಡತನವನ್ನು ನಿರ್ಮೂಲನೆ ಮಾಡಿ ಆಗಿದೆ ಎಂದು ತಮ್ಮ ಬೆನ್ನನ್ನು ತಾನೇ ತಟ್ಟಿಕೊಂಡಿದ್ದ ಮೋದಿ ಅವರು ಈಗ ಚಿನ್ನ ಖರೀದಿಸಬೇಡಿ, ಪೆಟ್ರೋಲ್ ಮತ್ತು ಖಾದ್ಯ ಎಣ್ಣೆ ಕಡಿಮೆ ಬಳಸಿ, ವಿದೇಶ ಪ್ರವಾಸ ಮಾಡಬೇಡಿ ಮತ್ತು ಗೊಬ್ಬರ ಬಳಕೆ ತಗ್ಗಿಸಿ ಎಂದು ಬೇಡಿಕೊಳ್ಳುತ್ತಿರುವುದು ಯಾವ ಅಭಿವೃದ್ಧಿಯ ಲಕ್ಷಣ ಎನ್ನುವುದನ್ನು ಮೋದಿ ಸ್ಪಷ್ಟಪಡಿಸಬೇಕೆಂದು ಸಿದ್ದರಾಮಯ್ಯ ಅವರು ವ್ಯಂಗ್ಯವಾಡಿದ್ದಾರೆ.

### ದೇಶದಲ್ಲಿ ಎಡಬಿಡಂಗಿ ವಿದೇಶಾಂಗ ನೀತಿ

ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಖಾದ್ಯ ತೈಲ ಎಲ್ಲವೂ ದುಬಾರಿಯಾಗಿ ದೇಶದ ಜನರ ನಿತ್ಯದ ಜೀವನ ನಿರ್ವಹಣೆಗಾಗಿ ಪರದಾಡುವಂತಹ ಪರಿಸ್ಥಿತಿ ನಿರ್ಮಾಣಕ್ಕೆ ದೇಶದ ಎಡಬಿಡಂಗಿ ವಿದೇಶಾಂಗ ನೀತಿ ಕಾರಣ ಎನ್ನುವುದನ್ನು ಅರಿತುಕೊಳ್ಳುವಷ್ಟು ಜನತೆ ಪ್ರಬುದ್ಧರಾಗಿದ್ದಾರೆ. ಇರಾನ್ ವಿರುದ್ಧ ಇಸ್ರೇಲ್ ಮತ್ತು ಅಮೇರಿಕಾ ಜಂಟಿಯಾಗಿ ನಡೆಸುತ್ತಿರುವ ಯುದ್ಧದ ನಡುವೆ ಭಾರತ ಸಿಕ್ಕಿಹಾಕಿಕೊಂಡು ಒದ್ದಾಡುತ್ತಿದೆ ಎಂದು ಮುಖ್ಯಮಂತ್ರಿ ಆರೋಪಿಸಿದ್ದಾರೆ.

# ಮೇ 15ರಿಂದ ಬಿತ್ತನೆ ಆಲೂಗೆಡ್ಡೆ ಮಾರಾಟ

## ಕ್ವಿಂಟಾಲ್‌ಗೆ 1,200ರೂ. ನಿಗದಿ : ಜಿಲ್ಲಾ ಸಲಹಾ ಸಮಿತಿ ಸಭೆಯಲ್ಲಿ ತೀರ್ಮಾನ

• ಪ್ರಜೋದಯ ವರದಿ

**ಹಾಸನ:** ಮುಂಗಾರು ಹಂಗಾಮಿನ ಬಿತ್ತನೆ ಆಲೂಗೆಡ್ಡೆಯ ಮಾರಾಟ ದರವನ್ನು ಕ್ವಿಂಟಾಲ್‌ಗೆ 1,200 ರೂ.ಗೆ ನಿಗದಿ ಪಡಿಸಿ, ಮಾರಾಟ ಪ್ರಕ್ರಿಯೆಯನ್ನು ಮೇ 15 ರಿಂದ ಪ್ರಾರಂಭಿಸಲು ತೀರ್ಮಾನಿಸಲಾಯಿತು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಆಲೂಗೆಡ್ಡೆ ಜಿಲ್ಲಾ ಸಲಹಾ ಸಮಿತಿ ಸಭೆಯಲ್ಲಿ ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ.ಸ್ವರೂಪ್, ವರ್ತಕರ ಸಮ್ಮುಖದಲ್ಲಿ ಚರ್ಚೆ ನಡೆಸಿ ಅಂತಿಮ ನಿರ್ಧಾರ ಪ್ರಕಟಿಸಲಾಯಿತು.

ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ಆಲೂಗೆಡ್ಡೆ ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆ. ವರ್ಷದಿಂದ ವರ್ಷಕ್ಕೆ ಬೆಳೆಯ ವಿಸ್ತೀರ್ಣ ಕುಸಿಯುತ್ತಿದ್ದು, ಆಲೂಗೆಡ್ಡೆ ಬೆಳೆಯಲು ಉತ್ತೇಜನ ನೀಡಬೇಕು. ಗುಣಮಟ್ಟದ ಬಿತ್ತನೆ ಬೀಜವನ್ನು ಕೃಷಿಕರಿಗೆ ಒದಗಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

2026-27ನೇ ಸಾಲಿನ ಮುಂಗಾರು ಹಂಗಾಮಿನ ಬಿತ್ತನೆ ಆಲೂಗೆಡ್ಡೆಯ ಮಾರಾಟ ದರವನ್ನು ಕ್ವಿಂಟಾಲ್‌ಗೆ 1,200 ರೂ. ಗಳಿಗೆ ನಿಗದಿ ಪಡಿಸಿದ್ದು, ರೈತರ ಹಿತ ಕಾಯುವ ದೃಷ್ಟಿಯಿಂದ ಕಡ್ಡಾಯವಾಗಿ ಬೆಳೆ ವಿಮೆ ಮಾಡಿಸುವಂತೆ ರೈತರಲ್ಲಿ ಜಾಗೃತಿ ಮೂಡಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.




> ಮುನ್ನೆಚ್ಚರಿಕೆ ಕ್ರಮವಾಗಿ ಅಂಗಮಾರಿ ರೋಗವನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ರೈತರಿಗೆ ಸಮಯಕ್ಕೆ ಸರಿಯಾಗಿ ಔಷಧಿಗಳನ್ನು ಒದಗಿಸಬೇಕು ಹಾಗು ಬಿತ್ತನೆ ಬೀಜ ಖರೀದಿಸಿದ ವೇಳೆಯಲ್ಲಿ ಕಡ್ಡಾಯವಾಗಿ ರಶೀದಿ ನೀಡಬೇಕು.
>
> -ಕೆ.ಎಸ್.ಲತಾಕುಮಾರಿ, ಜಿಲ್ಲಾಧಿಕಾರಿ

ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ಆಲೂಗೆಡ್ಡೆ ಇತ್ತೀಚೆಗೆ ಸಂಪೂರ್ಣ ನಶಿಸುವ ಹಂತ ತಲುಪಿದ್ದು, ಅಧಿಕಾರಿಗಳು ಹೆಚ್ಚಿನ ಮುತುವರ್ಜಿ ವಹಿಸಿ ಕೆಲಸ ಮಾಡಬೇಕು. ಎಪಿಎಂಸಿಯಲ್ಲಿ ವರ್ತಕರು ನೋಂದಣಿ ಆಗುವುದರ ಜೊತೆಗೆ ಅದೇ ಪ್ರಾಂಗಣದಲ್ಲಿ ಬಿತ್ತನೆ ಬೀಜ ಮಾರಾಟ ಮಾಡಬೇಕು. ಆಲೂಗೆಡ್ಡೆ ಬೆಳೆಯಲು ಎಲ್ಲಾ ರೀತಿಯ ಅನುಕೂಲಕರ ವಾತಾವರಣ, ಉತ್ತಮ ಬಿತ್ತನೆ ಬೀಜ, ರಸಗೊಬ್ಬರ ಸೇರಿ ಸರ್ಕಾರದಿಂದ ಇರುವ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸುವಂತೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಮಾತನಾಡಿ, ಬಿತ್ತನೆ ಬೀಜದ ಬಗ್ಗೆ ಯಾವುದೇ ದೂರುಗಳು ಬಂದರೆ ಈಗಾಗಲೇ ರಚನೆಗೊಂಡಿರುವ ತಂಡ ತಕ್ಷಣ ಕ್ರಮ ವಹಿಸಬೇಕು. ಈಗಾಗಲೇ ಬಿತ್ತನೆ ಬೀಜದ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಿದ್ದು, ರೋಗಗ್ರಸ್ತ ಬೀಜವೆಂದು ಕಂಡು ಬಂದರೆ ಮಾರಾಟ ಮಾಡುವಂತಿಲ್ಲವೆಂದು ತಿಳಿಸಿದರು.

ಇದೇ ವೇಳೆಯಲ್ಲಿ ಆಲೂಗೆಡ್ಡೆ ಬೆಳೆಯ ಕುರಿತಾದ ಮಾಹಿತಿಯ ಪೋಸ್ಟರ್‌ನ್ನು ಬಿಡುಗಡೆ ಮಾಡಲಾಯಿತು. ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಯೋಗೇಶ್, ರೈತ ಸಂಘದ ಮುಖಂಡರಾದ ಮೂರ್ತಿ, ವರ್ತಕರ ಸಂಘದ ಅಧ್ಯಕ್ಷ ಗೋಪಾಲ್ ಮತ್ತಿತರರು ಸಭೆಯಲ್ಲಿ ಉಪಸ್ಥಿತರಿದ್ದರು.

# ರೈಲಿಗೆ ತಲೆ ಕೊಟ್ಟು ಯುವಕ ಆತ್ಮಹತ್ಯೆ

• ಪ್ರಜೋದಯ ವರದಿ



**ಹೊಳೆನರಸೀಪುರ:** ಯುವತಿ ವಿಚಾರವಾಗಿ ಕಿರುಕುಳ ನೀಡುತ್ತಿದ್ದಾರೆಂದು ಆರೋಪಿಸಿ ಆಡಿಯೋ ರೆಕಾರ್ಡ್ ಮಾಡಿಟ್ಟು ಯುವಕನೊಬ್ಬ ರೈಲಿಗೆ ತಲೆ ಕೊಟ್ಟು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲ್ಲೂಕಿನ ಕಡುವಿನಕೋಟೆ ಬಳಿ ನಡೆದಿದೆ.

ತಾಲ್ಲೂಕಿನ ಮಾಕವಳ್ಳಿ ಗ್ರಾಮದ ಅಭಿಷೇಕ್ (26) ಮೃತ ಯುವಕ. ಇದೇ ಗ್ರಾಮದ ಶಂಕರ, ದರ್ಶನ್, ಚೇತನ್, ದಿನೇಶ್ ಎಂಬವವರು ಯುವತಿಯೊಬ್ಬಳ ವಿಚಾರದಲ್ಲಿ ನನಗೆ ಕಿರುಕುಳ ನೀಡುತ್ತಿದ್ದಾರೆ. ನಾಲ್ವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ ಎಂದು ಆಡಿಯೋ ರೆಕಾರ್ಡ್ ಮಾಡಿಟ್ಟು ಭಾನುವಾರ ಸಂಜೆ ರೈಲಿಗೆ ಸಿಲುಕಿ ಆತ್ಮಹತ್ಯೆಗೆ ಶರಣಾಗಿದ್ದಾನೆ. ಆಡಿಯೋ ಆಧರಿಸಿ ಸ್ಥಳೀಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

# ಕೆರೆಗೆ ಬಿದ್ದ ಕಾರು: ತಂದೆ-ಮಗ ಪಾರು

• ಪ್ರಜೋದಯ ವರದಿ

**ಆಲೂರು:** ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಪಕ್ಕದ ಕೆರೆಗೆ ಕಾರು ಬಿದ್ದು, ತಂದೆ ಮತ್ತು ಮಗ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾದ ಘಟನೆ ತಾಲ್ಲೂಕಿನ ಪಾಳ್ಯ ಹೋಬಳಿಯ ಮುದ್ದನಾಯಕನಹಳ್ಳಿ ಪುರ (ಎಂ.ಹೆಚ್.ಪುರ) ಬಳಿ ನಡೆದಿದೆ.

ಪಾಳ್ಯ ಮಾರ್ಗದಿಂದ ನಲ್ಲೂರು ಮಗ್ಗೆ ಕಡೆಗೆ ತೆರಳುತ್ತಿದ್ದ ಕಾರು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಪಕ್ಕದ ಕೆರೆಗೆ ಉರುಳಿದೆ. ಕಾರಿನಲ್ಲಿದ್ದ ತಂದೆ ಮತ್ತು ಮಗ ಹೊರ ಬಂದು ಈಜುತ್ತಾ ದಡ ಸೇರಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕ್ರೇನ್ ಬಳಸಿ ಕಾರನ್ನು ಕೆರೆಯಿಂದ ಮೇಲಕ್ಕೆತ್ತಲಾಯಿತು.

ಕೆರೆ ಏರಿ ಮೇಲಿನ ರಸ್ತೆ ಕಿರಿದಾಗಿದ್ದು, ರಸ್ತೆ ಬಲಭಾಗದಲ್ಲಿ ತಡೆಗೋಡೆ ಇಲ್ಲದ ಪರಿಣಾಮ ವಾಹನಗಳು ನಿಯಂತ್ರಣ ತಪ್ಪಿದರೆ ನೇರವಾಗಿ ಕೆರೆಗೆ ಬೀಳುವ ಸ್ಥಿತಿ ನಿರ್ಮಾಣವಾಗಿದೆ. ಇದು ಇದೇ ಮೊದಲ ಘಟನೆ ಅಲ್ಲ. ಈ ಹಿಂದೆ ಸಹ ಹಲವು ವಾಹನಗಳು ಇದೇ ಸ್ಥಳದಲ್ಲಿ ಕೆರೆಗೆ ಬಿದ್ದಿವೆ. ಸಂಬಂಧಪಟ್ಟ ಇಲಾಖೆ ಮುನ್ನೆಚ್ಚರಿಕಾ ಕ್ರಮ ಕೈಗೊಂಡಿಲ್ಲವೆಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಈ ರಸ್ತೆಯಲ್ಲಿ ಪ್ರತಿದಿನ ಶಾಲಾ ವಾಹನಗಳು, ಕೆಎಸ್‌ಆರ್‌ಟಿಸಿ ಬಸ್‌ಗಳು, ಖಾಸಗಿ ವಾಹನಗಳು ಸೇರಿ ಸಾವಿರಾರು ವಾಹನಗಳು ಸಂಚರಿಸುತ್ತವೆ. ಅಪಾಯದ ಸಾಧ್ಯತೆ ಗೊತ್ತಿದ್ದರೂ ರಸ್ತೆ ಸುರಕ್ಷತಾ ಕಾಮಗಾರಿಗಳನ್ನು ಕೈಗೊಳ್ಳದಿರುವುದು ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ.

# ಜಿಲ್ಲೆಯಲ್ಲಿ ಮಾದಕ ವಸ್ತು ತಡೆಗೆ ಟಾಸ್ಕ್‌ಫೋರ್ಸ್

**ಕೆ.ಪಿ.ಸಾಗರ್ ರಾಜು**

• ಪ್ರಜೋದಯ ವರದಿ


- ಪೊಲೀಸ್, ಆರೋಗ್ಯ, ಅಬಕಾರಿ, ಅರಣ್ಯ ಇಲಾಖೆಗೆ ಹೆಚ್ಚಿನ ಜವಾಬ್ದಾರಿ
- ಹಿಮ್ಸ್‌ನಲ್ಲಿ ಪ್ರತ್ಯೇಕ ಡ್ರಗ್ ರಿಹ್ಯಾಬ್ ಸೆಂಟರ್

**ಹಾಸನ:** ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಗಾಂಜಾ, ಡ್ರಗ್ಸ್ ಸೇವನೆ ಪ್ರಕರಣ ತಡೆಗಟ್ಟಲು ಜಿಲ್ಲಾಡಳಿತ ಪೊಲೀಸ್, ಆರೋಗ್ಯ, ಅಬಕಾರಿ ಹಾಗು ಅರಣ್ಯ ಇಲಾಖೆಯನ್ನೊಳಗೊಂಡ ಟಾಸ್ಕ್‌ಪೋರ್ಸ್ ರಚಿಸುವ ಜೊತೆಗೆ ಹಿಮ್ಸ್ ಆಸ್ಪತ್ರೆಯಲ್ಲಿ ಪ್ರತ್ಯೇಕ ಡ್ರಗ್ ರಿಹ್ಯಾಬ್ ಸೆಂಟರ್ ಕೂಡ ತೆರೆಯಲಾಗಿದೆ.

ಜಿಲ್ಲೆಯಲ್ಲಿ ಗಾಂಜಾ, ಸಿಂಥೆಟಿಕ್ ಡ್ರಗ್ಸ್ ಮತ್ತು ಮತ್ತೇರಿಸುವ ಔಷಧಗಳ ಅಕ್ರಮ ಬಳಕೆ ಹಾಗು ಮಾರಾಟ ಪ್ರಕರಣಗಳು ಜಿಲ್ಲೆಯಲ್ಲಿ ಹೆಚ್ಚುತ್ತಿವೆ. ಯುವ ಸಮುದಾಯವನ್ನು ಕಾಡುತ್ತಿರುವ ಈ ಸಮಸ್ಯೆ ತಡೆಗೆ ಜಿಲ್ಲಾಡಳಿತ ಕಾರ್ಯಾಚರಣೆಗೆ ಮುಂದಾಗಿದೆ. ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರ ನೇತೃತ್ವದಲ್ಲಿ ಪೊಲೀಸ್, ಆರೋಗ್ಯ, ಅಬಕಾರಿ ಹಾಗು ಅರಣ್ಯ ಇಲಾಖೆಗಳ ಸಮನ್ವಯ ಸಭೆ ನಡೆಸಿ, ಜಿಲ್ಲೆಯನ್ನು ವ್ಯಸನಮುಕ್ತವಾಗಿಸುವ ಗುರಿಯೊಂದಿಗೆ ಇಲಾಖಾವಾರು ಜವಾಬ್ದಾರಿಗಳನ್ನು ನಿಗದಿಪಡಿಸಲಾಗಿದೆ.

**ಮೆಡಿಕಲ್ ಶಾಪ್‌ಗಳ ಮೇಲೆ ಕಣ್ಣು**

ಮಾದಕ ವಸ್ತುಗಳು ಹಾಗು ಮತ್ತೇರಿಸುವ ಔಷಧಗಳ ದುರ್ಬಳಕೆ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ಜಿಲ್ಲೆಯ ಔಷಧ ಅಂಗಡಿಗಳ ಮೇಲೆ ಅನಿರೀಕ್ಷಿತ ದಾಳಿ ನಡೆಸಲು ಸೂಚಿಸಲಾಗಿದೆ. ನಿಯಮ ಉಲ್ಲಂಘಿಸಿ ವೈದ್ಯರ ಸೂಚನೆ ಇಲ್ಲದೇ ನಿಷೇಧಿತ ಔಷಧ ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮಕ್ಕೆ ಜಿಲ್ಲಾಡಳಿತ ತೀರ್ಮಾನಿಸಿದೆ. ಪ್ರತಿ ಮೆಡಿಕಲ್ ಅಂಗಡಿಯ ಮುಂದೆಯೂ ಮಾದಕ ವಸ್ತುಗಳ ಮಾರಾಟ ನಿಷೇಧವೆಂಬ ಸೂಚನಾ ಫಲಕ ಅಳವಡಿಸುವಂತೆ ನಿರ್ದೇಶನ ನೀಡಲಾಗಿದೆ. ವಿಶೇಷವಾಗಿ ಕಾಲೇಜು ಪ್ರದೇಶಗಳು, ನಗರ ಹೊರವಲಯ ಮತ್ತು ಪ್ರವಾಸಿ ತಾಣಗಳ ಬಳಿ ಇರುವ ಅಂಗಡಿಗಳ ಮೇಲೆ ಹೆಚ್ಚುವರಿ ನಿಗಾ ಇಡಲು ಸೂಚಿಸಲಾಗಿದೆ. ಈ ನಿಟ್ಟಿನಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಅವರೇ ಕಾರ್ಯಾಚರಣೆಗೆ ಇಳಿಸಿದ್ದಾರೆ.



> ಜಿಲ್ಲಾಧಿಕಾರಿ ಸೂಚನೆಯಂತೆ ಮನೋರೋಗ ವಿಭಾಗದ 40 ಹಾಸಿಗೆಗಳಲ್ಲಿ 10 ಹಾಸಿಗೆಯನ್ನು ಡ್ರಗ್ ರಿಹ್ಯಾಬ್ ಸೆಂಟರ್‌ಗಾಗಿ ಮೀಸಲಿಡಲಾಗಿದೆ. ಇಲ್ಲಿ ದಾಖಲಾಗುವವರಿಗೆ ಉಚಿತ ಚಿಕಿತ್ಸೆ ನೀಡಲಾಗುವುದು. ಜಿಲ್ಲೆಯಲ್ಲಿ ಗಾಂಜಾ, ಡ್ರಗ್ಸ್, ಮದ್ಯ, ನಿಕೋಟಿನ್ ಸೇವನೆಯಿಂದ ಸಾಕಷ್ಟು ಜನರು ಮಾನಸಿಕ ರೋಗಕ್ಕೆ ತುತ್ತಾಗುತ್ತಿದ್ದಾರೆ.
>
> -ಡಾ||ಸಂತೋಷ್, ಡಿಹೆಚ್‌ಒ, ಹಿಮ್ಸ್ ಮನಶಾಸ್ತ್ರ ವಿಭಾಗ

> ಮಾದಕ ವಸ್ತುಗಳ ನಿಷೇಧಕ್ಕೆ ಈಗಾಗಲೇ ಕೈಗೊಂಡಿರುವ ಕ್ರಮಗಳು ಸಾಕಾಗುತ್ತಿಲ್ಲ. ಇನ್ನಷ್ಟು ಗಂಭೀರ ಕ್ರಮಗಳನ್ನು ಕೈಗೊಳ್ಳಲು ಒಂದೊಂದು ಇಲಾಖೆಗೂ ಜಿಲ್ಲಾಡಳಿತ ಗುರಿ ನಿಗದಿಪಡಿಸಿ, ಜಿಲ್ಲಾಡಳಿತದಿಂದ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಅಬಕಾರಿ, ಆರೋಗ್ಯ, ಪೊಲೀಸ್, ಅರಣ್ಯ ಇಲಾಖೆ ಅಧಿಕಾರಿಗಳಿಗೆ ಅನಿರೀಕ್ಷಿತ ದಾಳಿ ನಡೆಸಲು ನಿರ್ದೇಶನ ನೀಲಾಗಿದ್ದು, ಆದರೂ ಸವಾಲು ತುಂಬ ದೊಡ್ಡದಿದೆ, ಪ್ರಯತ್ನವನ್ನೂ ನಡೆಸಲಾಗುತ್ತಿದೆ.
>
> - ಕೆ.ಎಸ್.ಲತಾಕುಮಾರಿ ಜಿಲ್ಲಾಧಿಕಾರಿ

ನಗರದ ಹಿಮ್ಸ್ ಆಸ್ಪತ್ರೆನಲ್ಲಿ ವಿಶೇಷ ಡ್ರಗ್ ರಿಹ್ಯಾಬಿಲಿಟೇಷನ್ ಕೇಂದ್ರ ಆರಂಭಿಸಲು ಕ್ರಮ ಕೈಗೊಳ್ಳಲಾಗಿದೆ. ಮಾನಸಿಕ ಆರೋಗ್ಯ ವಿಭಾಗದ 40 ಹಾಸಿಗೆಗಳಲ್ಲಿ 10 ಹಾಸಿಗೆಗಳನ್ನು ಮಾದಕ ವ್ಯಸನಿಗಳ ಚಿಕಿತ್ಸೆಗೆ ಮೀಸಲಿಡ

» ನಾಲ್ಕನೇ ಪುಟದಲ್ಲಿ

# ತೋಟದ ಮನೆಯ ಮುಂದೆ ಚಿರತೆ ಪ್ರತ್ಯಕ್ಷ

• ಪ್ರಜೋದಯ ವರದಿ

**ಅರಸೀಕೆರೆ :** ಗ್ರಾಮೀಣ ಭಾಗಗಳಲ್ಲಿ ಚಿರತೆಗಳ ಓಡಾಟ ಹೆಚ್ಚುತ್ತಿರುವ ಆತಂಕದ ನಡುವೆ, ತೋಟದ ಮನೆಯ ಮುಂದೆ ರಾತ್ರಿ ವೇಳೆ ಚಿರತೆ ಪ್ರತ್ಯಕ್ಷವಾಗಿ ಕುಟುಂಬದವರಲ್ಲಿ ಕೆಲಕಾಲ ಭೀತಿಯ ವಾತಾವರಣ ನಿರ್ಮಾಣವಾದ ಘಟನೆ ಮುದ್ದರಂಗನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಅಶೋಕ್ ಅವರ ತೋಟದ ಮನೆಯ ಎದುರು ಹೊಂಚು ಹಾಕುತ್ತಿದ್ದ ಚಿರತೆಯ ದೃಶ್ಯ ಸಿಸಿ ಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ರಾತ್ರಿ ವೇಳೆ ಮನೆಯ ಮುಂದೆ



ಚಿರತೆಯನ್ನು ಕಂಡು ಶ್ವಾನ ಜೋರಾಗಿ ಬೊಗಳತೊಡಗಿತ್ತು. ಎಚ್ಚೆತ್ತ ಮನೆಯವರು ಪರಿಶೀಲಿಸಿದಾಗ, ಮನೆಯ ಸಮೀಪದಲ್ಲೇ ಚಿರತೆ ಓಡಾಡುತ್ತಿರುವುದು ಕಂಡು ಬಂದಿದೆ. ಕುಟುಂಬಸ್ಥರು ಕಿರುಚಾಡುತ್ತಿದ್ದಂತೆಯೇ ಚಿರತೆ ಅಲ್ಲಿಂದ ಓಡಿ ಹೋಗಿದೆ.

# ಅಪಘಾತ : ಗಾಯಗೊಂಡಿದ್ದ 7 ಮಂದಿಗೆ ಎಂಎಂಎಂ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ

• ಪ್ರಜೋದಯ ವರದಿ

**ಹಾಸನ:** ಅಂಬೇಡ್ಕರ್ ಜಯಂತಿ ಮೆರವಣಿಗೆ ವೀಕ್ಷಣೆ ವೇಳೆ ನಡೆದ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಒಂದೇ ಕುಟುಂಬದ 7 ಜನರಿಗೆ ನಗರದ ಮಹಾಲಕ್ಷ್ಮಿ ಮಂಜಪ್ಪ ಮಲ್ಟಿ ಸ್ಪಷಾಲಿಟಿ (ಎಂಎಂಎಂ) ಆಸ್ಪತ್ರೆಯಲ್ಲಿ ರೋಗಿಗಳಿಂದ ಹಣ ಪಡೆಯದೆ ಉಚಿತವಾಗಿ ಶಸ್ತ್ರ ಚಿಕಿತ್ಸೆ, ಒಂದು ತಿಂಗಳ ಕಾಲ ಚಿಕಿತ್ಸೆ ನಡೆಸಲಾಗಿದೆ ಎಂದು ಆಸ್ಪತ್ರೆಯ ಮುಖ್ಯಸ್ಥ ಡಾ||ಉಮೇಶ್ ಅವರು ತಿಳಿಸಿದರು.




ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏ.14 ರಂದು ಚಿಕ್ಕಮಗಳೂರು ಜಿಲ್ಲೆ ಬಿಳಿಕಲ್ಲು ಗ್ರಾಮದಲ್ಲಿ ನಡೆಯುತ್ತಿದ್ದ ಅಂಬೇಡ್ಕರ್ ಜಯಂತಿ ಮೆರವಣಿಗೆ ವೀಕ್ಷಣೆಗಾಗಿ ರಸ್ತೆ ಬದಿ ನಿಂತಿದ್ದ ಕುಟುಂಬದವರ ಮೇಲೆ ಅಪರಿಚಿತ ಕಾರು ಹರಿದ ಪರಿಣಾ 7 ವರ್ಷದ ಮಗು ಸ್ಥಳದಲ್ಲೇ ಮೃತಪಟ್ಟು, 7 ಮಂದಿ ಗಂಭೀರ ಗಾಯಗೊಂಡಿದ್ದರು. ಹೆಚ್ಚಿನ ಚಿಕಿತ್ಸೆಗಾಗಿ ಎಲ್ಲರನ್ನೂ ಎಂಎಂಎಂ ಆಸ್ಪತ್ರೆಗೆ ಕರೆತರಲಾಗಿತ್ತು. ನಮ್ಮ ಆಸ್ಪತ್ರೆಯ ವೈದ್ಯರು ಶಸ್ತ್ರ ಚಿಕಿತ್ಸೆ ನಡೆಸಿ, ಎಲ್ಲರ ಜೀವ ಉಳಿಸಿದ್ದೇವೆಂದರು.

ಗಾಯಗೊಂಡಿದ್ದ 12 ವರ್ಷದ ನಿಶ್ಚಲ ಎಂಬ ಬಾಲಕಿಯ ಕಿಡ್ನಿ ಒಡೆದು ಹೊಟ್ಟೆ ಒಳಗೆ ರಕ್ತಸ್ರಾವವಾಗುತ್ತಿತ್ತು. ರಕ್ತ ಸಂಚಾರ ನಿಂತು ಹೋಗಿ ಬಿಪಿ ಕಡಿಮೆಯಾಗಿತ್ತು. ಹೃದಯದ ಬಡಿತ ನಿಂತು ಹೋಗಿತ್ತು. ಬಹುಶಃ ಬಾಲಕಿ ಉಳಿಯುವುದಿಲ್ಲ ಅಂದುಕೊಂಡಿದ್ದೆವು. ದೇವರ ದಯೆ, ನಮ್ಮ ವೈದ್ಯರ ತಂಡದ ನಿರಂತರ ಪರಿಶ್ರಮದಿಂದಾಗಿ ಶಸ್ತ್ರಚಿಕಿತ್ಸೆ ಮಾಡಿದ್ದು, ಬಾಲಕಿ ಬದುಕುಳಿದಳು. ಗಂಭೀರವಾಗಿ ಗಾಯಗೊಂಡಿದ್ದ ಶೃತಿ, ತೃಪ್ತಿ, ಕುತ್ತಿಗೆ ಮುರಿದಿದ್ದ ನಾಗರಾಜ್, ಮತ್ತು ಚೇತನ್, ತಿಮ್ಮರಾಜ, ಉಷಾ ಸೇರಿ ಎಲ್ಲರೂ

» ನಾಲ್ಕನೇ ಪುಟದಲ್ಲಿ

# ಸುದರ್ಶನ್ ನಿಧನಕ್ಕೆ ಪತ್ರಕರ್ತರ ಸಂಘ ಸಂತಾಪ

• ಪ್ರಜೋದಯ ವರದಿ

**ಹಾಸನ:** ಸಕಲೇಶಪುರ ತಾಲ್ಲೂಕಿನ ಪತ್ರಕರ್ತ ಸುದರ್ಶನ್ ಹಾಗು ಹಳೇಬೀಡಿನ ಹಿರಿಯ ಪತ್ರಕರ್ತ ರಘುನಾಥ್ ಅವರ ತಾಯಿ ವೆಂಕಟಲಕ್ಷ್ಮಮ್ಮ ಅವರ ನಿಧನಕ್ಕೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಸೋಮವಾರ ಸಂತಾಪ ಸಭೆ ನಡೆಸಿ, ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರು ಮಾತನಾಡಿ, ಸುದರ್ಶನ್ ಅವರು ಹಲವು ವರ್ಷಗಳಿಂದ ಪತ್ರಿಕಾ ಕ್ಷೇತ್ರದಲ್ಲಿ ನಿಷ್ಠೆಯಿಂದ ಸೇವೆ ಸಲ್ಲಿಸಿದ್ದರು. ಕೆಲ ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಮಂಗಳೂರು, ಮಡಿಕೇರಿ ಸೇರಿ ವಿವಿಧ ಕಡೆ ಚಿಕಿತ್ಸೆ ಪಡೆದರೂ ಆರೋಗ್ಯದಲ್ಲಿ ಚೇತರಿಕೆ ಕಾಣಲಿಲ್ಲ. ಅವರ ಕುಟುಂಬಕ್ಕೆ ಆರ್ಥಿಕ ನೆರವು ನೀಡುವ ಸಂಬಂಧ ಸಂಘದ ರಾಜ್ಯಾಧ್ಯಕ್ಷರೊಂದಿಗೆ ಮಾತನಾಡಲಾಗಿದೆ ಎಂದರು.

ರಘುನಾಥ್ ಅವರ ತಾಯಿ ವೆಂಕಟಲಕ್ಷ್ಮಮ್ಮ ಅವರು ಕುಟುಂಬದ ಬೆನ್ನೆಲುಬಾಗಿದ್ದರು. ಅವರ ಪತಿ ನಂತರ ಪುತ್ರ ಪತ್ರಿಕೋದ್ಯಮದಲ್ಲಿ ಕೆಲಸ ಮಾಡುತ್ತಿದ್ದಾರೆ. ಹಳೇಬೀಡಿಗೆ ತೆರಳಿ ಅವರ ದರ್ಶನ ಪಡೆಯಲಾಯಿತು ಎಂದರು.




ಸಂಘದ ಮಾಜಿ ಅಧ್ಯಕ್ಷ ಬಿ.ಆರ್. ಉದಯಕುಮಾರ್ ಮಾತನಾಡಿ, ಪತ್ರಕರ್ತರ ಜೀವನ ನಿರಂತರ ಒತ್ತಡ, ಓಡಾಟ ಮತ್ತು ಜವಾಬ್ದಾರಿಗಳಿಂದ ಕೂಡಿರುತ್ತದೆ. ಸುದ್ದಿ ಬೆನ್ನಟ್ಟುವ ಧಾವಂತದಲ್ಲಿ ನಾವು ನಮ್ಮ ಆರೋಗ್ಯ ಕಡೆಗಣಿಸುತ್ತೇವೆ. ಸುದರ್ಶನ್ ಕಳೆದ ಮೂರು ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಇಂತಹ ಘಟನೆಗಳು ಆರೋಗ್ಯದ ಮಹತ್ವವನ್ನು ಮತ್ತೆ ನೆನಪಿಸುತ್ತವೆ, ಎಲ್ಲಾ ಪತ್ರಕರ್ತರು ಅದರಲ್ಲೂ ಎಲೆಕ್ಟ್ರಾನಿಕ್ ಮೀಡಿಯಾದ ಗೆಳೆಯರು ಎಚ್ಚರಿಕೆ ವಹಿಸಿ ಎಂದು ಸಲಹೆ ನೀಡಿದರು.

ಸಭೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್, ಕಾರ್ಯದರ್ಶಿಗಳಾದ ಖುಷ್ವಂತ್, ಹರೀಶ್ ಮಾತನಾಡಿ, ಮೃತರ ಆತ್ಮಕ್ಕೆ ಶಾಂತಿ ಕೋರಿದರು. ಆರಂಭದಲ್ಲಿ ಒಂದು ನಿಮಿಷ ಮೌನಾಚರಣೆ ಮಾಡಲಾಯಿತು.

### ಮೇ 18 ರಿಂದ 23ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ-2

**ಹಾಸನ :** ಎಸ್‌ಎಸ್‌ಎಲ್‌ಸಿ ಪರೀಕ್ಷೆ -2 ಮೇ 18ರಿಂದ ಮೇ 23ರ ವರೆಗೆ ಬೆಳಿಗ್ಗೆ 10 ರಿಂದ 1.15 ರವರೆಗೆ 8 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದ್ದು, ಅಭ್ಯರ್ಥಿಗಳು ಒಂದು ಘಂಟೆ ಮುಂಚಿತವಾಗಿ ಪರೀಕ್ಷಾ ಕೇಂದ್ರಕ್ಕೆ ಬರುವುದು, ವಿದ್ಯಾರ್ಥಿಗಳು ಕಡ್ಡಾಯವಾಗಿ ಸಮವಸ್ತ್ರ ಧರಿಸುವುದು, ಪ್ರವೇಶ ಪತ್ರ ಮತ್ತು ಅಗತ್ಯ ಲೇಖನ ಸಾಮಾಗ್ರಿಗಳೊಂದಿಗೆ ಹಾಜರಾಗುವುದು, ವಿಶೇಷಚೇತನ ಅಭ್ಯರ್ಥಿಗಳಿಗೆ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಲಾಗಿದೆ.

## ಪಟ್ಟಣ ಸ್ವಚ್ಛ, ಹೊರವಲಯ ನಿರ್ಲಕ್ಷ್ಯ: ಸಾರ್ವಜನಿಕರಿಂದ ಆಕ್ರೋಶ


# ಬೇಲೂರಿನ ಹೆಬ್ಬಾಗಿಲಲ್ಲೇ ಕಸದ ರಾಶಿಯ ಸ್ವಾಗತ

• ಪ್ರಜೋದಯ ವರದಿ

**ಬೇಲೂರು :** ಶಿಲ್ಪಕಲೆಗಳ ತವರೂರು ಎಂದು ಹೆಮ್ಮೆ ಪಡುವ ಪಟ್ಟಣದ ಹೆಬ್ಬಾಗಿಲಲ್ಲೇ ಕಸದ ರಾಶಿಗಳು ಪ್ರವಾಸಿಗರು, ಸಾರ್ವಜನಿಕರನ್ನು ಸ್ವಾಗತಿಸುತ್ತಿವೆ.

ಒಂದು ಕಡೆ ಪುರಸಭೆ ಕಸಮುಕ್ತ ಬೇಲೂರು ಎಂಬ ಘೋಷಣೆಯೊಂದಿಗೆ ಸ್ವಚ್ಛತಾ ಜಾಗೃತಿ ಅಭಿಯಾನ ನಡೆಸುತ್ತಿದ್ದರೆ, ಮತ್ತೊಂದೆಡೆ ಪಟ್ಟಣದ ಹೊರವಲಯದ ಪ್ರಮುಖ ರಸ್ತೆಗಳಲ್ಲಿ ಕಸ ಗುಡ್ಡೆಗಳು ದುರ್ವಾಸನೆ ಬೀರುತ್ತಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಮೂಡಿಗೆರೆ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಕುವೆಂಪುನಗರ ಮತ್ತಿತರ ಕಡೆ ಅನಧಿಕೃತ ಕಸದ ತಾಣಗಳು ನಿರ್ಮಾಣಗೊಂಡಿವೆ. ರಸ್ತೆ ಬದಿಯಲ್ಲಿ ದಿನೇ ದಿನೇ ಹೆಚ್ಚಾಗುತ್ತಿರುವ ಕಸದ ರಾಶಿಯಿಂದ ವಾಹನ ಸವಾರರು, ಪಾದಚಾರಿಗಳು ಹಾಗೂ ಅಂಗಡಿ ಮಾಲೀಕರು ಸಂಕಷ್ಟ ಅನುಭವಿಸುತ್ತಿದ್ದಾರೆ.

ರಸ್ತೆ ಬದಿಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯ, ಹಾಳಾದ ಆಹಾರ ಪದಾರ್ಥಗಳು, ಗೃಹ ತ್ಯಾಜ್ಯ ಮಾತ್ರವಲ್ಲದೆ ವೈದ್ಯಕೀಯ ತ್ಯಾಜ್ಯವೂ ಎಸೆಯಲಾಗುತ್ತಿದೆ. ಕಸದ ರಾಶಿಗಳ ಸುತ್ತ ಬೀದಿ ನಾಯಿಗಳು, ಹಸುಗಳು ಹಾಗು ಇಲಿಗಳ ಹಾವಳಿ ಹೆಚ್ಚಿದ್ದು, ಸಾಂಕ್ರಾಮಿಕ ರೋಗ ಹರಡುವ ಆತಂಕ ವ್ಯಕ್ತವಾಗಿದೆ. ಮಳೆಯಾದರೆ ಕಸ ನೀರಿನಲ್ಲಿ ಬೆರೆತು ರಸ್ತೆಗೆ ಹರಿದು ಬರುತ್ತದೆ. ನಡೆದುಕೊಂಡು ಹೋಗುವುದೇ ಕಷ್ಟವಾಗಿದೆ ಎಂದು ಸ್ಥಳೀಯ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.



**ಅತಂತ್ರ ಸ್ಥಿತಿ ನಿರ್ಮಾಣ**

ಕುವೆಂಪುನಗರ ಭಾಗ ಪಟ್ಟಣಕ್ಕೆ ಹೊಂದಿ ಕೊಂಡಿದ್ದರೂ ಸಂಪೂರ್ಣವಾಗಿ ಪುರಸಭೆ ವ್ಯಾಪ್ತಿಗೆ ಸೇರಿಲ್ಲವೆನ್ನುವ ಕಾರಣದಿಂದ ಪುರಸಭೆ ಅಧಿಕಾರಿಗಳು ಈ ಪ್ರದೇಶದತ್ತ ಗಮನ ಹರಿಸುತ್ತಿಲ್ಲ ಎಂಬ ಆರೋಪ ಕೇಳಿ ಬರುತ್ತಿದೆ. ಇತ್ತ ಗ್ರಾಮ ಪಂಚಾಯಿತಿಯೂ ಪಟ್ಟಣಕ್ಕೆ ಹೊಂದಿಕೊಂಡ ಪ್ರದೇಶ ಎನ್ನುವ ನೆಪದಲ್ಲಿ ಹೊಣೆಗಾರಿಕೆಯಿಂದ ದೂರ ಉಳಿದಿದೆ ಎಂಬ ಟೀಕೆ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗಿದೆ.

**ಪಟ್ಟಣ ಹೊರ ಭಾಗ ನಿರ್ಲಕ್ಷ್ಯ**

ಬೇಲೂರು ಪುರಸಭೆಯ ಪೌರ ಕಾರ್ಮಿಕರು ಪಟ್ಟಣದ ಒಳಭಾಗದಲ್ಲಿ ಉತ್ತಮವಾಗಿ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿದ್ದಾರೆಂಬ ಮೆಚ್ಚುಗೆಯೂ ಸಾರ್ವಜನಿಕರಿಂದ ವ್ಯಕ್ತವಾಗುತ್ತಿದೆ. ವಿಶೇಷವಾಗಿ ದೇವಸ್ಥಾನ ಸುತ್ತಮುತ್ತ, ಪ್ರಮುಖ ಬೀದಿಗಳು ಹಾಗೂ ವ್ಯಾಪಾರ ಪ್ರದೇಶಗಳಲ್ಲಿ ನಿಯಮಿತ ಸ್ವಚ್ಛತೆ ಕಾಣಸುತ್ತಿದೆ.

ಆದರೆ, ಪಟ್ಟಣದ ಹೆಬ್ಬಾಗಿಲು ಎಂದೇ ಪರಿಗಣಿಸಲ್ಪಡುವ ಜೆ.ಪಿ. ನಗರ ಹಾಗು ಕುವೆಂಪುನಗರ ಭಾಗಗಳು ನಿರ್ಲಕ್ಷ್ಯಕ್ಕೊಳಗಾಗಿರು ವುದು ಸ್ಥಳೀಯರ ಬೇಸರಕ್ಕೆ ಕಾರಣವಾಗಿದೆ.

> ಪಟ್ಟಣಕ್ಕೆ ಹೊಂದಿಕೊಂಡಿರುವ ಕುವೆಂಪುನಗರ ಭಾಗದಲ್ಲಿ ಕಸ ಹಾಕದಂತೆ ಈಗಾಗಲೇ ಎರಡು-ಮೂರು ಬಾರಿ ಎಚ್ಚರಿಕೆ ನೀಡಿದ್ದರೂ ಕೆಲವರು ರಾತ್ರಿ ವೇಳೆಯಲ್ಲಿ ಕಸ ತಂದು ಸುರಿಯುತ್ತಿರುವ ಘಟನೆಗಳು ನಡೆಯುತ್ತಿವೆ. ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.
>
> -ಬಸವರಾಜ್ ಶಿಗ್ಗಾವಿ, ಪುರಸಭೆ ಮುಖ್ಯಾಧಿಕಾರಿ

ಭಕ್ತಿ-ಭಾವ

75 ವರ್ಷಗಳ ಹಿಂದೆ ಭವ್ಯವಾದ ಸೋಮನಾಥ ದೇವಾಲಯದ ಪುನರ್‌ನಿರ್ಮಾಣ ಮತ್ತು ಪ್ರತಿಷ್ಠಾಪನೆಯು ಭಾರತದ ನಾಗರಿಕತೆಯ ವೈಭವದ ಮರುಕಳಿಕೆಯಲ್ಲಿ ಒಂದು ನಿರ್ಣಾಯಕ ಕ್ಷಣವಾಗಿತ್ತು. ಇದು ಭಾರತದ ಚೇತರಿಸಿಕೊಳ್ಳುವ ಶಕ್ತಿ ಮತ್ತು ದೃಢಸಂಕಲ್ಪವನ್ನು ಪುನರುಚ್ಚರಿಸಿತು. ಇವೇ ಗುಣಗಳು ಇಂದು ಪ್ರಧಾನಮಂತ್ರಿ ನರೇಂದ್ರ ಮೋದಿಯವರ ವಿಕಸಿತ ಭಾರತ 2047 ಮಿಷನ್‌ನ ಕೇಂದ್ರಬಿಂದುವಾಗಿವೆ.

ಈ ಪವಿತ್ರ ಮೈಲಿಗಲ್ಲಿನ 75ನೇ ವಾರ್ಷಿಕೋತ್ಸವವು ರಾಷ್ಟ್ರಕ್ಕೆ ಒಂದು ಭವ್ಯವಾದ ಆತ್ಮ ವಿಶ್ವಾಸವನ್ನು ನೀಡುತ್ತದೆ. ಸಾವಿರ ವರ್ಷಗಳ ಕಾಲ ಮತಾಂಧರಿಂದ ಸರಣಿ ದಾಳಿಗಳಿಗೆ ಒಳಗಾದರೂ, ಅದನ್ನೆಲ್ಲ ಮೆಟ್ಟಿ ನಿಂತು ಮತ್ತಷ್ಟು ಬಲಿಷ್ಠವಾಗಿ ಹೊರಹೊಮ್ಮಿದ ಭಾರತೀಯ ನಾಗರಿಕತೆಯ ಅಡಿಪಾಯ ಮತ್ತು ಸಾಮರ್ಥ್ಯವನ್ನು ಇದು ಸಾಬೀತುಪಡಿಸುತ್ತದೆ.

ಗುಜರಾತ್‌ನ ಪ್ರಶಾಂತ ಸಮುದ್ರತೀರದಲ್ಲಿರುವ ಈ ದೇವಾಲಯವು ಪ್ರತಿ ದಾಳಿಯ ನಂತರವೂ ತನ್ನೆಲ್ಲಾ ವೈಭವದೊಂದಿಗೆ ಅವಶೇಷಗಳಿಂದ ಮತ್ತೆ ಪುಟಿದೆದ್ದಿದೆ. ಹಲವು ವಿಧಗಳಲ್ಲಿ, ಈ ದೇವಾಲಯದ ಇತಿಹಾಸವು ನಮ್ಮ ದೇಶದ ಭೂತಕಾಲವನ್ನೇ ಪ್ರತಿಬಿಂಬಿಸುತ್ತದೆ; ಅಂದರೆ, ಶಾಂತಿಪ್ರಿಯರಾದ ನಮ್ಮ ಜನರು ತಮ್ಮ ನಂಬಿಕೆ, ಸಂಸ್ಕೃತಿ ಮತ್ತು ಪರಂಪರೆಯ ಮೇಲಿನ ಕ್ರೂರ ದಾಳಿಗಳ ನಂತರವೂ ಹೇಗೆ ಮತ್ತೆ ಪುಟಿದೆದ್ದರು ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

ಪ್ರಧಾನಿ ಮೋದಿ ಅವರು ಹೇಳಿದಂತೆ, ಸೋಮನಾಥ ದೇವಾಲಯವನ್ನು ಧ್ವಂಸ ಗೊಳಿಸಲು ಹೇಗೆ ಪದೇ ಪದೆ ಪ್ರಯತ್ನಗಳು ಮತ್ತು ಸಂಚುಗಳು ನಡೆದವೋ, ಹಾಗೆಯೇ ವಿದೇಶಿ ಆಕ್ರಮಣಕಾರರು ಶತಮಾನಗಳ ಕಾಲ ಭಾರತವನ್ನು ಸರ್ವನಾಶ ಮಾಡಲು ಪ್ರಯತ್ನಿಸಿದರು. ಆದರೂ, ಪೂಜ್ಯನೀಯವಾದ ಆ ಪುಣ್ಯಕ್ಷೇತ್ರವಾಗಲಿ ಅಥವಾ ಈ ದೇಶವಾಗಲಿ ನಾಶವಾಗಲಿಲ್ಲ.

ಸೋಮನಾಥ ದೇವಾಲಯದ ಮೇಲಿನ ದಾಳಿಗಳ ಉದ್ದೇಶವು ಕೇವಲ ಲೂಟಿ ಮಾಡುವುದಕ್ಕಿಂತಲೂ ಹೆಚ್ಚು ಭೀಕರವಾಗಿತ್ತು ಎಂಬುದನ್ನು ಪ್ರಧಾನಿ ಸ್ಪಷ್ಟಪಡಿಸಿದರು. ದಾಳಿಗಳು ಕೇವಲ ಲೂಟಿಗಾಗಿ ಮಾತ್ರ ಆಗಿದ್ದರೆ, ಸಾವಿರ ವರ್ಷಗಳ ಹಿಂದಿನ ಮೊದಲ ದೊಡ್ಡ ಲೂಟಿಯ ನಂತರವೇ ಅವು ನಿಂತುಹೋಗಬೇಕಿತ್ತು. ಆದರೆ ಹಾಗಿರಲಿಲ್ಲ.

ಸೋಮನಾಥನ ಪವಿತ್ರ ಮೂರ್ತಿಯನ್ನು ಅಪವಿತ್ರಗೊಳಿಸಲಾಯಿತು, ದೇವಾಲಯದ ಸ್ವರೂಪವನ್ನು ಪದೇ ಪದೇ ಬದಲಾಯಿಸಲಾಯಿತು. ಆದರೆ ನಮಗೆ ಮಾತ್ರ ಸೋಮನಾಥ ದೇವಾಲಯವನ್ನು ಕೇವಲ ಲೂಟಿಗಾಗಿ ಧ್ವಂಸಗೊಳಿಸಲಾಯಿತು ಎಂದು ಕಲಿಸಲಾಯಿತು.


ದ್ವೇಷ, ದಮನ ಮತ್ತು ಭಯೋತ್ಪಾದನೆಯ ಆ ಕ್ರೂರ ಇತಿಹಾಸವನ್ನು ನಮ್ಮಿಂದ ಮರೆಮಾಚಲಾಗಿತ್ತು ಎಂದು ಅವರು ಹೇಳಿದರು.

**ನೆಹರೂ ಅವರ ವಿರೋಧ**

ಸ್ವಾತಂತ್ರ್ಯದ ನಂತರ, ಸರ್ದಾರ್ ಪಟೇಲರು ಸೋಮನಾಥ ದೇವಾಲಯದ ಪುನರ್‌ನಿರ್ಮಾಣದ ಕಾರ್ಯದ ನೇತೃತ್ವ ವಹಿಸಿದರು. ಇದು ಹೊಸದಾಗಿ ಸ್ವತಂತ್ರಗೊಂಡ ಭಾರತದ ರಾಷ್ಟ್ರೀಯ ಆತ್ಮವಿಶ್ವಾಸದ ಆರಂಭಿಕ ಅಭಿವ್ಯಕ್ತಿಗಳಲ್ಲಿ ಒಂದಾಗಿತ್ತು. ಆದರೆ ಈ ಕಾರ್ಯವೂ ಅಡೆತಡೆಗಳನ್ನು ಎದುರಿಸಿತು. ಅಂದಿನ ರಾಷ್ಟ್ರಪತಿ ಡಾ.ರಾಜೇಂದ್ರ ಪ್ರಸಾದ್ ಅವರು ಈ ಐತಿಹಾಸಿಕ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವ ನಿರ್ಧಾರವನ್ನು ಭಾರತದ ಮೊದಲ

“ಸೋಮನಾಥ ದೇವಾಲಯದ ಮೇಲಿನ ದಾಳಿಗಳ ಉದ್ದೇಶವು ಕೇವಲ ಲೂಟಿ ಮಾಡುವುದಕ್ಕಿಂತಲೂ ಹೆಚ್ಚು ಭೀಕರವಾಗಿತ್ತು ಎಂಬುದನ್ನು ಪ್ರಧಾನಿ ಸ್ಪಷ್ಟಪಡಿಸಿದರು. ದಾಳಿಗಳು ಕೇವಲ ಲೂಟಿಗಾಗಿ ಮಾತ್ರ ಆಗಿದ್ದರೆ, ಸಾವಿರ ವರ್ಷಗಳ ಹಿಂದಿನ ಮೊದಲ ದೊಡ್ಡ ಲೂಟಿಯ ನಂತರವೇ ಅವು ನಿಂತುಹೋಗಬೇಕಿತ್ತು. ಆದರೆ ಹಾಗಿರಲಿಲ್ಲ.

# ಸೋಮನಾಥದಿಂದ ಸಿಂದೂರದ ವರೆಗೆ ಭಾರತ ಪುನರುತ್ಥಾನ



ಪ್ರಧಾನಿ ಜವಾಹರಲಾಲ್ ನೆಹರೂ ಅವರು ಅಧಿಕೃತವಾಗಿ ವಿರೋಧಿಸಿದ್ದರು.

ಆದಾಗ್ಯೂ, ರಾಷ್ಟ್ರಪತಿಯವರು ಮೇ 11, 1951ರಂದು ದೇವಾಲಯವನ್ನು ಉದ್ಘಾಟಿಸಿದರು. ಶತಮಾನಗಳ ಕ್ರೂರ ದಮನದ ನಂತರ, ಈ ಪುನರ್‌ನಿರ್ಮಾಣವು ಭಾರತದ ಸಾಂಸ್ಕೃತಿಕ ಪುನರುಜ್ಜೀವನ ಮತ್ತು ನಾಗರಿಕತೆಯ ಬಗ್ಗೆ ಹೆಮ್ಮೆಯ ಬೀಜಗಳನ್ನು ಬಿತ್ತಿತು.

ಕಾಶಿ ವಿಶ್ವನಾಥ ಮತ್ತು ಉಜ್ಜಯಿನಿಯ ಮಹಾಕಾಳೇಶ್ವರ ದೇವಾಲಯಗಳ ಕಾಯಕಲ್ಪದಿಂದ ಹಿಡಿದು ಅಯೋಧ್ಯೆಯ ಭವ್ಯ ರಾಮಮಂದಿರದವರೆಗೆ; ಕೇದಾರನಾಥದ ಪುನರುತ್ಥಾನದಿಂದ ಹಿಡಿದು ಅಸಂಖ್ಯಾತ ಪರಂಪರೆಯ ತಾಣಗಳ ಸಂರಕ್ಷಣೆಯವರೆಗೆ, ಭಾರತವು ಇಂದು ತನ್ನ ನಾಗರಿಕತೆಯ ಇತಿಹಾಸವನ್ನು ಘನತೆ ಮತ್ತು ಸ್ಪಷ್ಟ ಉದ್ದೇಶದೊಂದಿಗೆ ಮರಳಿ ಪಡೆಯುತ್ತಿದೆ. ಈ ಪ್ರಯತ್ನಗಳು ಪ್ರವಾಸಿಗರ ಸಂಖ್ಯೆಯನ್ನು ಹೆಚ್ಚಿಸುತ್ತಿವೆ ಮತ್ತು ಸ್ಥಳೀಯ ಜನರಿಗೆ ಹಲವಾರು ಉದ್ಯೋಗ ಹಾಗೂ ವ್ಯಾಪಾರ ಅವಕಾಶಗಳನ್ನು ಸೃಷ್ಟಿಸುತ್ತಿವೆ.

**ಜಾಗತಿಕ ಹೆಜ್ಜೆ ಗುರುತು**

ಸೋಮನಾಥ ದೇವಾಲಯದಂತೆಯೇ ಭಾರತವೂ ಇಂದು ಮತ್ತಷ್ಟು ಬಲಿಷ್ಠವಾಗಿ ಹೊರ ಹೊಮ್ಮಿದೆ. ವಿಶ್ವದ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಮತ್ತು ಆಧುನಿಕತೆಯ ಜೊತೆಗೆ ತನ್ನ ಶ್ರೀಮಂತ ಪರಂಪರೆಯನ್ನು ವಿಶಿಷ್ಟವಾಗಿ ಸಮ್ಮಿಳಿತ ಗೊಳಿಸಿರುವ ದೇಶವಾಗಿ ಭಾರತವು ಜಾಗತಿಕ ಮಟ್ಟದಲ್ಲಿ ಅಲೆಗಳನ್ನು ಸೃಷ್ಟಿಸುತ್ತಿದೆ. 2014ರಲ್ಲಿ ದೇಶವು ಮೋದಿ ಸರ್ಕಾರಕ್ಕೆ ಅಭೂತಪೂರ್ವ ಬಹುಮತ ನೀಡಿ ಅಧಿಕಾರಕ್ಕೆ ತಂದ ನಂತರ, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ದಾಖಲೆ ಮಟ್ಟದ 175 ದೇಶಗಳ ಬೆಂಬಲದೊಂದಿಗೆ ಅಂತರರಾಷ್ಟ್ರೀಯ ಯೋಗ ದಿನವನ್ನು ಆಚರಿಸುವ ನಿರ್ಣಯವನ್ನು ಅಂಗೀಕರಿಸಿತು.

ಯೋಗವು ಇಂದು ಜಾಗತಿಕ ಮಟ್ಟದ ಆರೋಗ್ಯ ಚಳುವಳಿಯಾಗಿ ಬೆಳೆದಿದ್ದು, ಪ್ರಪಂಚದಾದ್ಯಂತದ ಎಲ್ಲಾ ಸಂಸ್ಕೃತಿಗಳ ಜನರಿಗೆ ಪ್ರಯೋಜನವನ್ನು ನೀಡುತ್ತಿದೆ. ಒಂದು ದಶಕದ ನಂತರ, ಅರಬ್ ಸಂಯುಕ್ತ ಸಂಸ್ಥಾನ ಸರ್ಕಾರವು ಉಡುಗೊರೆಯಾಗಿ ನೀಡಿದ ಭೂಮಿಯಲ್ಲಿ ಪ್ರಧಾನಿ ಮೋದಿಯವರು ಮಧ್ಯಪ್ರಾಚ್ಯದ ಭವ್ಯ ದೇವಾಲಯವನ್ನು ಉದ್ಘಾಟಿಸಿದರು.

ಇದಕ್ಕೂ ಮೊದಲು, ಪ್ರಧಾನಿಯವರು ಬಹ್ರೇನ್‌ನಲ್ಲಿ 200 ವರ್ಷ ಹಳೆಯದಾದ ದೇವಾಲಯದ ನವೀಕರಣ ಕಾರ್ಯಕ್ಕೆ ಚಾಲನೆ ನೀಡಿದ್ದರು. ಅವರು ನಿಯಮಿತವಾಗಿ ಅನಿವಾಸಿ ಭಾರತೀಯರೊಂದಿಗೆ ಸಂವಾದ ನಡೆಸುತ್ತಿದ್ದು, ಅವರನ್ನು ಭಾರತೀಯ ಸಾಂಸ್ಕೃತಿಕ ಪರಂಪರೆಯ ಹೆಮ್ಮೆಯ ರಾಯಭಾರಿಗಳನ್ನಾಗಿ ಮಾಡುತ್ತಿದ್ದಾರೆ.


**ಆಯುಷ್ ಮತ್ತು ಯೋಗದ ಜಾಗತೀಕರಣ**

ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಉತ್ತೇಜಿಸುವುದು ಮತ್ತು ನಮ್ಮ ಸಾಂಪ್ರದಾಯಿಕನ ವ್ಯವಸ್ಥೆಯ ವೃತ್ತಿಪರರಿಗೆ ಜಾಗತಿಕ ಅವಕಾಶಗಳನ್ನು ಸೃಷ್ಟಿಸುವುದು ಇತ್ತೀಚಿನ ವರ್ಷಗಳಲ್ಲಿ ಭಾರತವು ಅಭಿವೃದ್ಧಿ ಹೊಂದಿದ ದೇಶಗಳೊಂದಿಗೆ ಸಹಿ ಮಾಡಿರುವ ಮುಕ್ತ ವ್ಯಾಪಾರ ಒಪ್ಪಂದಗಳ ಪ್ರಮುಖ ಅಂಶವಾಗಿದೆ. ನಮ್ಮ ಕುಶಲಕರ್ಮಿಗಳು, ಕಾರ್ಮಿಕರು, ರೈತರು, ಮೀನುಗಾರರು, ಸಣ್ಣ ಉದ್ಯಮಗಳು ಮತ್ತು ನವೋದ್ಯಮಗಳಿಗೆ ಲಾಭದಾಯಕ ಜಾಗತಿಕ ಅವಕಾಶಗಳನ್ನು ಸೃಷ್ಟಿಸುವುದರ ಜೊತೆಗೆ, ಈ ವ್ಯಾಪಾರ ಒಪ್ಪಂದಗಳು ಪ್ರಧಾನಮಂತ್ರಿಯವರ ವಿಕಾಸ್ ಭಿ, ವಿರಾಸತ್ ಭಿ (ಅಭಿವೃದ್ಧಿಯೂ ಬೇಕು, ಪರಂಪರೆಯೂ ಬೇಕು) ಎಂಬ ದೃಷ್ಟಿಕೋನವನ್ನು ಮುಂದುವರಿಸುತ್ತಿವೆ.

ಇತ್ತೀಚೆಗೆ ನ್ಯೂಜಿಲೆಂಡ್ ಜೊತೆಗೆ ಮುಕ್ತಾಯಗೊಂಡ ವ್ಯಾಪಾರ ಒಪ್ಪಂದವು ಸಾಂಪ್ರದಾಯಿಕ ಔಷಧ ಮತ್ತು ಸಮಗ್ರ ಆರೋಗ್ಯ ರಕ್ಷಣೆಯಲ್ಲಿ ಭಾರತದ ಜಾಗತಿಕ ತಲುಪುವಿಕೆಯಲ್ಲಿ ಒಂದು ಪ್ರಮುಖ ಮೈಲಿಗಗಿದೆ. ಇದು ಆಯುಷ್ ವೈದ್ಯರು ಮತ್ತು ಯೋಗ ತರಬೇತುದಾರರು ಹಾಗೂ ಇತರ ಭಾರತೀಯ ಸಾಂಸ್ಕೃತಿಕ ಮತ್ತು ಜ್ಞಾನ ವೃತ್ತಿಪರರಿಗೆ ನ್ಯೂಜಿಲೆಂಡ್‌ನಲ್ಲಿ ಕೆಲಸ ಮಾಡಲು ವೀಸಾ ಕೋಟಾಗಳನ್ನು ಒದಗಿಸುತ್ತದೆ.

ಈ ಒಪ್ಪಂದವು ಆಯುರ್ವೇದ, ಯೋಗ ಮತ್ತು ಇತರ ಸಾಂಪ್ರದಾಯಿಕ ವೈದ್ಯಕೀಯ ಸೇವೆಗಳ ವ್ಯಾಪಾರಕ್ಕೆ ಪೂರಕ ವಾತಾವರಣವನ್ನು ನಿರ್ಮಿಸುತ್ತದೆ ಮತ್ತು ಆಯುಷ್ ಅನ್ನು ಆಧುನಿಕ, ಜಾಗತಿಕವಾಗಿ ಪ್ರಸ್ತುತವಾಗಿರುವ ಆರೋಗ್ಯ ಪರಿಹಾರವಾಗಿ ಗುರುತಿಸುತ್ತದೆ.

ಬ್ರಿಟನ್, ಐರೋಪ್ಯ ಒಕ್ಕೂಟ ಮತ್ತು ಆಸ್ಟ್ರೇಲಿಯಾದೊಂದಿಗಿನ ವ್ಯಾಪಾರ ಒಪ್ಪಂದಗಳೂ ಇಂತಹದೇ ನಿಬಂಧನೆಗಳನ್ನು ಹೊಂದಿವೆ. ಐರೋಪ್ಯ ಒಕ್ಕೂಟದೊಂದಿಗಿನ ಒಪ್ಪಂದವು ಆಯುಷ್ ವೈದ್ಯರು ಭಾರತದಲ್ಲಿ ಪಡೆದ ವೃತ್ತಿಪರ ಅರ್ಹತೆಗಳನ್ನು ಬಳಸಿಕೊಂಡು ಅಲ್ಲಿ ಸೇವೆಗಳನ್ನು ಒದಗಿಸಲು ಅನುವು ಮಾಡಿಕೊಡುತ್ತದೆ. ಇದು ಯುರೋಪಿನ ಸದಸ್ಯ ರಾಷ್ಟ್ರಗಳಲ್ಲಿ ಆಯುಷ್ ಸ್ವಾಸ್ಥ್ಯ ಕೇಂದ್ರಗಳು ಮತ್ತು ಚಿಕಿತ್ಸಾಲಯಗಳ ಸ್ಥಾಪನೆಗೆ ಸಹಕಾರಿಯಾಗಿದೆ.



ಹೊಸ ಬೆದರಿಕೆಗಳ ನಿರ್ಮೂಲನೆ ಭಾರತದ ಸಾಂಸ್ಕೃತಿಕ ಪರಂಪರೆಯು ಜಾಗತಿಕ ಗಮನ ಸೆಳೆಯುತ್ತಿರುವ ಈ ಹೊತ್ತಿನ, ದೇಶವು ಈಗಲೂ ಕೆಲವು ಮತಾಂಧರ ಗುರಿಯಾಗಿದೆ. ಇವರು ಭಾರತದ ಸೌಹಾರ್ದಯುತ ಪರಂಪರೆಯನ್ನು ಕೆಡಿಸಲು ಭಯೋತ್ಪಾದನೆ ಮತ್ತು ನುಸುಳುವಿಕೆಯನ್ನು ಬಳಸಿಕೊಳ್ಳುತ್ತಿದ್ದಾರೆ.

ಪ್ರಧಾನಿ ಮೋದಿಯವರ ನೇತೃತ್ವದ ಈ ನವ ಭಾರತ ಇಂತಹ ಬೆದರಿಕೆಗಳಿಗೆ ಪ್ರಬಲವಾಗಿಯೇ ಪ್ರತಿಕ್ರಿಯಿಸುತ್ತದೆ. ಆಪರೇಷನ್ ಸಿಂದೂರ ಮೂಲಕ ಭಾರತವು ಭಯೋತ್ಪಾದಕರಿಗೆ ಮತ್ತು ಗಡಿಯಾಚೆಗಿನ ಅವರ ಪೋಷಕರಿಗೆ ತಕ್ಕ ಪಾಠ ಕಲಿಸಿದೆ. ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ, ಪಶ್ಚಿಮ ಬಂಗಾಳದ ಮತದಾರರು ನುಸುಳುವಿಕೆಯನ್ನು ಬೆಂಬಲಿಸುವ, ಮತಬ್ಯಾಂಕ್ ರಾಜಕಾರಣ ಮಾಡುವ ಮತ್ತು ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಕುಗ್ಗಿಸುವ ಪಕ್ಷಗಳನ್ನು ತಿರಸ್ಕರಿಸಿದ್ದಾರೆ.

ಗಮನಾರ್ಹವೆಂದರೆ, ಆಪರೇಷನ್ ಸಿಂದೂರ್‌ನ ವಾರ್ಷಿಕೋತ್ಸವ ಮತ್ತು ಸೋಮನಾಥ ದೇವಾಲಯದ ಪುನರ್ ನಿರ್ಮಾಣದ ವಾರ್ಷಿಕೋತ್ಸವಗಳು ಕೇವಲ ಕೆಲವೇ ದಿನಗಳ ಅಂತರದಲ್ಲಿ ಬರುತ್ತವೆ. ಈ ಎರಡೂ ಘಟನೆಗಳು ಭಾರತದ ಚೇತರಿಸಿಕೊಳ್ಳುವ ಶಕ್ತಿ ಮತ್ತು ಸಾಮರ್ಥ್ಯವನ್ನು ಎತ್ತಿ ತೋರಿಸುತ್ತವೆ.

ಸೋಮನಾಥದ ಕಥೆ ರಾಜಕೀಯವನ್ನು ಮೀರಿದಂತದ್ದು. ಇದು ಶರಣಾಗಲು ಒಪ್ಪದ ಒಂದು ನಾಗರಿಕತೆಯ ಕಥೆ. ಪುನರ್ ನಿರ್ಮಾಣಗೊಂಡು ಎಪ್ಪತ್ತೈದು ವರ್ಷಗಳ ನಂತರ, ಸೋಮನಾಥವು ಇಂದು ಕೇವಲ ಒಂದು ದೇವಾಲಯವಾಗಿ ಮಾತ್ರವಲ್ಲದೆ, ಭಾರತದ ಸ್ಥಿತಿಸ್ಥಾಪಕತ್ವ, ನಿರಂತರತೆ ಮತ್ತು ರಾಷ್ಟ್ರೀಯ ಆತ್ಮವಿಶ್ವಾಸದ ಶಾಶ್ವತ ಸಂಕೇತವಾಗಿ ಅಚಲವಾಗಿ ನಿಂತಿದೆ.

– **ಪಿಯೂಷ್ ಗೋಯಲ್,** (ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು)

# ನೀಲಿ ಬಂಗಾರದ ಕಥೆ – ಭಾರತದ ಇಂಡಿಗೋ

ಇಂಡಿಗೋಫೆರಾ ಸಸ್ಯದ ಎಲೆಗಳಿಂದ ತಯಾರಿಸಲಾಗುವ ಇಂಡಿಗೋ ಅಥವಾ ನೀಲಿ ಬಣ್ಣವು ಭಾರತದಲ್ಲಿ ಸಾವಿರಾರು ವರ್ಷಗಳಿಂದ ಬಳಕೆಯಲ್ಲಿದೆ. ಪುರಾತತ್ವ ಮತ್ತು ಜವಳಿ ಪುರಾವೆಗಳ ಪ್ರಕಾರ, ಸಿಂಧೂ ನಾಗರೀಕತೆ ಕಾಲದಿಂದಲೂ ಹಾಗೂ ನಂತರದ ಶಾಸ್ತ್ರೀಯ ಮತ್ತು ಮಧ್ಯಕಾಲೀನ ಅವಧಿಗಳಲ್ಲಿ ಭಾರತೀಯ ನೇಕಾರರು ಇಂಡಿಗೋವನ್ನು ಬಳಸುತ್ತಿದ್ದರು ಎಂಬುದು ತಿಳಿದುಬರುತ್ತದೆ. ಭಾರತದಲ್ಲಿ ತಯಾರಾದ ಈ ನೀಲಿ ಬಣ್ಣವು ವ್ಯಾಪಾರ ಮಾರ್ಗಗಳ ಮೂಲಕ ರೋಮನ್ ಸಾಮ್ರಾಜ್ಯ, ಪರ್ಷಿಯಾ ಮತ್ತು ನಂತರ ಒಟ್ಟೋಮನ್ ಹಾಗೂ ಯುರೋಪಿಯನ್ ಮಾರುಕಟ್ಟೆಗಳನ್ನು ತಲುಪಿತ್ತು. 15ನೇ ಶತಮಾನದ ಕೊನೆಯಲ್ಲಿ ಪೋರ್ಚುಗೀಸರು ಭಾರತಕ್ಕೆ ನೇರ ಸಮುದ್ರ ಮಾರ್ಗಗಳನ್ನು ಕಂಡುಹಿಡಿದ ನಂತರ ಇದು ಮತ್ತಷ್ಟು ವಿಸ್ತರಿಸಿತು.

17ನೇ ಮತ್ತು 18ನೇ ಶತಮಾನದ ಹೊತ್ತಿಗೆ, ಯುರೋಪಿಯನ್ ಶಕ್ತಿಗಳು ವಿಶೇಷವಾಗಿ ಬ್ರಿಟಿಷ್ ಮತ್ತು ಡಚ್ ಈಸ್ಟ್ ಇಂಡಿಯಾ ಕಂಪನಿಗಳು ಭಾರತೀಯ ಇಂಡಿಗೋವನ್ನು ನೀಲಿ ಬಂಗಾರ ಎಂದು ಪರಿಗಣಿಸಲು ಪ್ರಾರಂಭಿಸಿದವು. ಯುರೋಪಿನ ಬೆಳೆಯುತ್ತಿರುವ ಜವಳಿ ಉದ್ಯಮಗಳಲ್ಲಿ ನೀಲಿ ಬಟ್ಟೆಗಳಿಗೆ ಇದ್ದ ಹೆಚ್ಚಿನ ಬೇಡಿಕೆಯನ್ನು ಪೂರೈಸಲು ಇದು ಅತ್ಯಮೂಲ್ಯವಾದ ವಸ್ತುವಾಗಿತ್ತು. ಭಾರತದ ಈ ನೀಲಿ ಬಂಗಾರವನ್ನು ಯುರೋಪಿನ ರಾಜವಂಶಸ್ಥರೆಲ್ಲ ತೊಟ್ಟು ಈ ಬಣ್ಣ ರಾಯಲ್ ಬ್ಲೂ ಎಂಬ ಹೆಸರನ್ನು ಕೂಡ ಪಡೆಯಿತು. ಭಾರತದ ಬೆಚ್ಚಗಿನ ಹವಾಮಾನ, ಸಾಂಪ್ರದಾಯಿಕ ಬಣ್ಣಗಾರಿಕೆಯ ಕಲೆ ಮತ್ತು ದೊಡ್ಡ ಪ್ರಮಾಣದ ಕೃಷಿ ಲಭ್ಯತೆಯು ಭಾರತವನ್ನು ವಿಶ್ವದ ಪ್ರಮುಖ ಪೂರೈಕೆದಾರನನ್ನಾಗಿ ಮಾಡಿತು.

**ಬ್ರಿಟಿಷರಿಂದ ಶೋಷಣೆ ಮತ್ತು ಬಂಗಾಳ-ಬಿಹಾರದ ಏಳಿಗೆ**

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಡಳಿತದಲ್ಲಿ, ಇಂಡಿಗೋ ಕೇವಲ ಒಂದು ಪ್ರಾದೇಶಿಕ ಕಲೆಯಾಗಿ ಉಳಿಯದೆ, ಸಂಪೂರ್ಣವಾಗಿ ನಿಯಂತ್ರಿಸಲ್ಪಟ್ಟ ನಗದು ಬೆಳೆಯಾಗಿ ಬದಲಾಯಿತು. 18ನೇ ಶತಮಾನದ ಉತ್ತರಾರ್ಧದಲ್ಲಿ, ಫ್ರೆಂಚ್ ಇಂಜಿನಿಯರ್ ಲೂಯಿಸ್ ಬೊನಾಡ್ ಬಂಗಾಳದಲ್ಲಿ ದೊಡ್ಡ ಪ್ರಮಾಣದ ಇಂಡಿಗೋ ತೋಟಗಳನ್ನು ಪ್ರಾರಂಭಿಸಿದರು. ನಂತರ ಬ್ರಿಟಿಷರು ಈ ಮಾದರಿಯನ್ನು ಬಿಹಾರ ಮತ್ತು ಬಂಗಾಳದಾದ್ಯಂತ ಎರಡು ವ್ಯವಸ್ಥೆಗಳ ಮೂಲಕ ವಿಸ್ತರಿಸಿದರು:

**ನಿಜ್ ವ್ಯವಸ್ಥೆ:** ಕಂಪನಿಗಳೇ ಭೂಮಿಯನ್ನು ಹೊಂದಿರುತ್ತಿದ್ದವು ಮತ್ತು ನೇರವಾಗಿ ಕಾರ್ಮಿಕರನ್ನು ನೇಮಿಸಿಕೊಳ್ಳುತ್ತಿದ್ದವು.

**ರೈತವಾರಿ ವ್ಯವಸ್ಥೆ:** ರೈತರು ತಮ್ಮ ಭೂಮಿಯ ಒಂದು ಭಾಗದಲ್ಲಿ ಕಡ್ಡಾಯವಾಗಿ ಇಂಡಿಗೋ ಬೆಳೆಯಲು ಒಪ್ಪಂದಗಳಿಗೆ ಸಹಿ ಹಾಕುವಂತೆ ಒತ್ತಾಯಿಸಲಾಗುತ್ತಿತ್ತು.

**ರೈತರು ಸಾಲದ ಸುಳಿಗೆ ಸಿಲುಕಿದರು:** ಅವರು ಪ್ಲಾಂಟರ್‌ಗಳಿಂದ ಹೆಚ್ಚಿನ ಬಡ್ಡಿದರದಲ್ಲಿ ಸಾಲ ಪಡೆದರು, ಆಹಾರ ಬೆಳೆಗಳ ಬದಲಿಗೆ ಇಂಡಿಗೋ ಬೆಳೆಯುವುದಾಗಿ ಭರವಸೆ ನೀಡಿದರು, ಆದರೆ ಅಂತಿಮ ಮಾರುಕಟ್ಟೆ ಬೆಲೆಯ ಅತಿ ಸಣ್ಣ ಭಾಗ ಮಾತ್ರ ಅವರಿಗೆ ದೊರೆಯುತ್ತಿತ್ತು. 19ನೇ ಶತಮಾನದ ಮಧ್ಯಭಾಗದ ವೇಳೆಗೆ, ಬಂಗಾಳವೊಂದರಲ್ಲೇ ಸಾವಿರಕ್ಕೂ ಹೆಚ್ಚು ಇಂಡಿಗೋ ಕಾರ್ಖಾನೆಗಳಿದ್ದವು. ಈ ಬೆಳೆಯು ವಸಾಹತುಶಾಹಿ ಆದಾಯಕ್ಕೆ ಎಷ್ಟು ಪ್ರಮುಖವಾಗಿತ್ತೆಂದರೆ, ನಂತರ ಹಲವು ಸಮಾಜ ಸುಧಾರಕರು ಇಂಗ್ಲೆಂಡ್‌ಗೆ ತಲುಪಿದ ಪ್ರತಿಯೊಂದು ಇಂಡಿಗೋ ಪೆಟ್ಟಿಗೆಯ ಮೇಲೂ ಮಾನವನ ರಕ್ತದ ಕಲೆಯಿದೆ ಎಂದು ಬಣ್ಣಿಸಿದರು.

ಈ ಶೋಷಣೆಯು 1859–1860ರಲ್ಲಿ ಬಂಗಾಳದಲ್ಲಿ ಇಂಡಿಗೋ ದಂಗೆಗೆ ಕಾರಣವಾಯಿತು. ಸಾವಿರಾರು ರೈತರು ಇಂಡಿಗೋ ಬೆಳೆಯಲು ನಿರಾಕರಿಸಿದರು ಮತ್ತು ಕಾರ್ಖಾನೆಗಳ ಮೇಲೆ ದಾಳಿ ಮಾಡಿದರು. ಅಂತಿಮವಾಗಿ ಬ್ರಿಟಿಷ್ ಸರ್ಕಾರವು ಒಂದು ಆಯೋಗವನ್ನು ರಚಿಸಲು ಒತ್ತಾಯಿಸಿತು, ಆ ಆಯೋಗವು ಈ ವ್ಯವಸ್ಥೆಯ ಕ್ರೌರ್ಯವನ್ನು ಬಯಲಿಗೆಳೆಯಿತು. ಬಿಹಾರದಲ್ಲಿ ತೀಕಾತಿಯಾ ವ್ಯವಸ್ಥೆಯು ದೀರ್ಘಕಾಲದವರೆಗೆ ಅಸ್ತಿತ್ವದಲ್ಲಿತ್ತು, ಅಲ್ಲಿ ರೈತರು ತಮ್ಮ ಭೂಮಿಯ ಮೂರನೇ ಒಂದು ಭಾಗದಲ್ಲಿ ಇಂಡಿಗೋ ಬೆಳೆಯುವುದು ಕಡ್ಡಾಯವಾಗಿತ್ತು.

**ಜರ್ಮನ್ ಆವಿಷ್ಕಾರ: ಸಿಂಥೆಟಿಕ್ ಇಂಡಿಗೋ**

ಭಾರತೀಯ ಇಂಡಿಗೋ ತನ್ನ ಉತ್ತುಂಗದಲ್ಲಿದ್ದಾಗಲೇ, ಯುರೋಪಿಯನ್ ರಸಾಯನಶಾಸ್ತ್ರಜ್ಞರು ನೀಲಿ ಬಣ್ಣವನ್ನು ಪ್ರಯೋಗಾಲಯದಲ್ಲಿ ತಯಾರಿಸಲು ಪ್ರಯತ್ನಿಸುತ್ತಿದ್ದರು. ಜರ್ಮನ್ ರಸಾಯನಶಾಸ್ತ್ರಜ್ಞ ಅಡಾಲ್ಫ್ ವಾನ್ ಬೇಯರ್ ಇದರಲ್ಲಿ ಪ್ರಮುಖ ಪಾತ್ರ ವಹಿಸಿದರು. ಅವರು 1880ರಲ್ಲಿ ಅನಿಲಿನ್‌ನಿಂದ ಇಂಡಿಗೋವನ್ನು ಸಂಶ್ಲೇಷಿಸಿದರು ಮತ್ತು ಅದರ ಆಣ್ವಿಕ ರಚನೆಯನ್ನು ಗುರುತಿಸಿದರು. ಇದು ವಿಜ್ಞಾನ ಲೋಕದ ಮಹತ್ವದ

**ಮೈಲಿಗಲ್ಲಾಗಿತ್ತು:** ಸಸ್ಯಗಳಿಂದ ಪಡೆಯುವ ಬದಲಿಗೆ ಪ್ರಯೋಗಾಲಯದಲ್ಲಿ ಮರುಸೃಷ್ಟಿಸಲಾದ ಮೊದಲ ಸಂಕೀರ್ಣ ಸಾವಯವ ಬಣ್ಣಗಳಲ್ಲಿ ಇದೂ ಒಂದಾಗಿತ್ತು.

ಜರ್ಮನಿಯ ರಾಸಾಯನಿಕ ಕಂಪನಿಗಳು, ವಿಶೇಷವಾಗಿ ಲುಡ್ವಿಗ್ಶಾಫೆನ್‌ನಲ್ಲಿರುವ ಬಿಎಎಸ್‌ಎಫ್, ಬೇಯರ್ ಅವರ ಸಂಶೋಧನೆಯನ್ನು ಕೈಗಾರಿಕಾ ಪ್ರಕ್ರಿಯೆಯಾಗಿ ಬದಲಾಯಿಸಿದವು. 1897ರಲ್ಲಿ, ಬಿಎಎಸ್‌ಎಫ್ ಮೊದಲ ಬಾರಿಗೆ ಕೈಗಾರಿಕಾ ಮಟ್ಟದ ಸಂಶ್ಲೇಷಿತ ಇಂಡಿಗೋವನ್ನು ಬಿಡುಗಡೆ ಮಾಡಿತು. ಇದರ ಕಡಿಮೆ ಬೆಲೆ ಮತ್ತು ಗುಣಮಟ್ಟವು ನೈಸರ್ಗಿಕ ಇಂಡಿಗೋಗಿಂತ ಹೆಚ್ಚು ಆಕರ್ಷಕವಾಗಿತ್ತು. ಕೇವಲ ಹತ್ತು ವರ್ಷಗಳಲ್ಲಿ ಸಂಶ್ಲೇಷಿತ ಇಂಡಿಗೋಗೆ ಬೇಡಿಕೆ ಎಷ್ಟು ಹೆಚ್ಚಾಯಿತೆಂದರೆ, 1913ರ ವೇಳೆಗೆ ಜಾಗತಿಕ ಮಾರುಕಟ್ಟೆಯಿಂದ ನೈಸರ್ಗಿಕ ಇಂಡಿಗೋ ಬಹುತೇಕ ಮಾಯವಾಯಿತು.

**ಭಾರತದ ಇಂಡಿಗೋ ಉದ್ಯಮದ ಪತನ**

ಇದರ ಪರಿಣಾಮ ಭಾರತದ ಮೇಲೆ ಭೀಕರವಾಗಿತ್ತು. ಯುರೋಪಿಯನ್ ಖರೀದಿದಾರರು ಜರ್ಮನ್ ಸಂಶ್ಲೇಷಿತ ಬಣ್ಣಕ್ಕೆ ಮೊರೆ ಹೋದರು. ಭಾರತದ ಇಂಡಿಗೋ ಬೆಳೆಗಾರರು ಮತ್ತು ರೈತರು ಬೆಲೆ ಕುಸಿತದಿಂದ ಕಂಗಾಲಾದರು.

ಬಿಹಾರ ಮತ್ತು ಬಂಗಾಳದಲ್ಲಿ ತಲೆಮಾರುಗಳಿಂದ ಇಂಡಿಗೋ ನಂಬಿಕೊಂಡಿದ್ದ ಸಮುದಾಯಗಳು ರಾತ್ರೋರಾತ್ರಿ ತಮ್ಮ ಜೀವನೋಪಾಯವನ್ನು ಕಳೆದುಕೊಂಡವು. ಇದು ಗ್ರಾಮೀಣ ಬಡತನವನ್ನು ಹೆಚ್ಚಿಸಿತು ಮತ್ತು ನಂತರದ ರಾಜಕೀಯ ಚಳುವಳಿಗಳಿಗೆ ನಾಂದಿಯಾಯಿತು. ಮಹಾತ್ಮಾ ಗಾಂಧೀಜಿಯವರ ಚಂಪಾರಣ್ ಸತ್ಯಾಗ್ರಹ (1917) ಕೂಡ ಇಂಡಿಗೋ ಬೆಳೆಗಾರರ ಮೇಲಿನ ದಬ್ಬಾಳಿಕೆಯ ವಿರುದ್ಧವೇ ಪ್ರಾರಂಭವಾಗಿತ್ತು.

**ಉಪಸಂಹಾರ: ಇಂದಿನ ಇಂಡಿಗೋ**

ಇಂದು, ನಾವು ಬಳಸುವ ಬಹುತೇಕ ಎಲ್ಲಾ ಡೆನಿಮ್ ಮತ್ತು ನೀಲಿ ಬಟ್ಟೆಗಳಿಗೆ ಬಿಎಎಸ್‌ಎಫ್ ಮತ್ತು ಹೋಕ್ಸ್ಟ್ ಕಂಪನಿಗಳು ಅಭಿವೃದ್ಧಿಪಡಿಸಿದ ಜರ್ಮನ್ ಪ್ರಕ್ರಿಯೆಯ ಸಂಶ್ಲೇಷಿತ ಇಂಡಿಗೋವನ್ನೇ ಬಳಸಲಾಗುತ್ತದೆ. ನೈಸರ್ಗಿಕ ಇಂಡಿಗೋ ಇಂದು ಕೇವಲ ಒಂದು ಸಣ್ಣ ಮಟ್ಟದ ಕರಕುಶಲ ಉತ್ಪನ್ನವಾಗಿ ಉಳಿದುಕೊಂಡಿದೆ ಇದನ್ನು ಮುಖ್ಯವಾಗಿ ಕೈಮಗ್ಗ, ಖಾದಿ ಮತ್ತು ಸಾಂಪ್ರದಾಯಿಕ ಕಲಾತ್ಮಕ ಬಣ್ಣಗಾರಿಕೆಯಲ್ಲಿ ಮಾತ್ರ ಬಳಸಲಾಗುತ್ತದೆ.

– **ದಿನೇಶ್** ವಾಲ್ಕೆ



# ಮದ್ದಿಲ್ಲದ ವೈರಸ್

## ಹಂಟಾ ; ಜಗತ್ತಿಗೆ ಸಂಕಟ

2020ರ ಆಸುಪಾಸಿನಲ್ಲಿ ಕೊರೊನಾ ವೈರಸ್ ಕಾಣಿಸಿಕೊಂಡು ಪ್ರಪಂಚದಾದ್ಯಂತ ಆಗಿದ್ದ ಅಲ್ಲೋಲ ಕಲ್ಲೋಲ ಇನ್ನೂ ಸರಿಯಾಗಿಲ್ಲ, ಅದರ ನಡುವೆಯೇ ಇನ್ನೊಂದು ಭೀಕರ, ಪ್ರಪಂಚಕ್ಕೇ ಮಾರಕವಾಗಬಲ್ಲ ಹಂಟಾ ವೈರಸ್ ಕಾಡಲಿದೆ ಎನ್ನುವ ಸುದ್ದಿ ಎಲ್ಲರನ್ನೂ ಭಯಭೀತರನ್ನಾಗಿಸಿದೆ. ಇನ್ನೂ ಮದ್ದು, ಲಸಿಕೆಯನ್ನು ಕಂಡು ಹಿಡಿಯಲಾಗಿರದ ಈ ಹಂಟಾ ವೈರಸ್ ಮಾನವನಿಂದ ಮಾನವನಿಗೆ ನೇರವಾಗಿ ಹರಡುವುದು ಅಪರೂಪ ಎನ್ನುವುದೇ ಒಂದು ಚೂರು ನೆಮ್ಮದಿಯ ಸಂಗತಿ. ಇದು ಹರಡುವುದು ಇಲಿ ಅಥವಾ ಹೆಗ್ಗಣಗಳ ಲಾಲಾರಸ (ಜೊಲ್ಲು), ಮೂತ್ರ ಮತ್ತು ಮಲದಿಂದ ಮಾತ್ರ. ಆದರೆ ಈ ಹೆಗ್ಗಣಗಳ ಲಾಲಾರಸ, ಮಲಮೂತ್ರಗಳು ಒಣಗಿದಾಗ ಅದರಲ್ಲಿ ಬೆಳೆದ ವೈರಸ್‌ಗಳು ಧೂಳಿನ ರೂಪದಲ್ಲಿ ಗಾಳಿಯ ಮೂಲಕ ಹರಡಬಹುದು ಎನ್ನುವುದೇ ಆತಂಕಕಾರಿ ಸಂಗತಿ.


ಹಕ್ಕಿ ಜ್ವರ, ಹಂದಿ ಜ್ವರ, ಇಲಿ ಜ್ವರ, ಬಾವಲಿ ಜ್ವರ ಹೀಗೆ ಹತ್ತು ಹಲವಾರು ಕಾಯಿಲೆಗಳು ಈಗೀಗ ಮಾನವನನ್ನು ಆಕ್ರಮಿಸುತ್ತಿದೆ. ತಂತ್ರಜ್ಞಾನ, ವಿಜ್ಞಾನ ಮೊದಲಾದ ಸಂಗತಿಗಳಲ್ಲಿ ಮಾನವ ಎಷ್ಟು ಮುಂದುವರಿದಿದ್ದಾನೋ ಅಷ್ಟೇ ಈ ಕಾಯಿಲೆಗಳು ಮಾನವನ್ನು ಜ್ಞಾನಕ್ಕೆ ಸವಾಲೊಡ್ಡಿ ಹಿಂಡಿ ಹಿಪ್ಪೆ ಮಾಡುತ್ತಿವೆ. ಹೊಸದಾಗಿ ಮದ್ದು ಅಥವಾ ಲಸಿಕೆ ಕಂಡು ಹಿಡಿಯುವಂತೆ ಮಾಡುತ್ತಿವೆ. ಈ ಸಾಲಿಗೆ ಈಗ ಸೇರಿಕೊಳ್ಳುತ್ತಿದೆ ಹಂಟಾ ವೈರಸ್. ಸದ್ಯಕ್ಕೆ ಇನ್ನೂ ಪ್ರಾಥಮಿಕ ಹಂತದ ಸುದ್ದಿಯಲ್ಲೇ ಇರುವ ಇದು ಕಂಡು ಬಂದಿರುವುದು ಅರ್ಜೆಂಟೀನಾದಿಂದ ಅಂಟಾರ್ಟಿಕಾಗೆ ಹೊರಟ ಒಂದು ಐಷಾರಾಮಿ ಹಡಗಿನ ಪ್ರಯಾಣಿಗರಲ್ಲಿ. ಈ ಹಡಗಿನಲ್ಲಿದ್ದ 8 ಮಂದಿಗೆ ಹಂಟಾ ವೈರಸ್ ಬಾಧಿಸಿದೆ ಮತ್ತು ಅದರಲ್ಲಿ ಮೂರು ಮಂದಿ ಈಗಾಗಲೇ ಮೃತ ಪಟ್ಟಿದ್ದಾರೆ ಎನ್ನುವುದು ವಿಶ್ವ ಆರೋಗ್ಯ ಸಂಸ್ಥೆ ನೀಡಿದ ಮಾಹಿತಿ. ಈ ಹಡಗಿನಲ್ಲಿ ಭಾರತೀಯರೂ ಇದ್ದಾರೆ ಎನ್ನುವ ಸುದ್ದಿ ಇದೆ. ಆದರೆ ಅವರಿಗೆ ಹಂಟಾ ವೈರಸ್ ಭಾಧಿಸಿದೇ ಎನ್ನುವ ಬಗ್ಗೆ ಇನ್ನೂ ಮಾಹಿತಿ ಇಲ್ಲ.

ಹಂಟಾ ವೈರಸ್ ಮೊತ್ತ ಮೊದಲು ಅಧಿಕೃತವಾಗಿ ಪತ್ತೆಯಾದದ್ದು 1976ರಲ್ಲಿ. ಆದರೆ ಅದಕ್ಕೂ ಮೊದಲು 1950ರ ದಶಕದಲ್ಲಿ ಕೊರಿಯಾ ಯುದ್ಧದ ಸಮಯದಲ್ಲಿ ಸುಮಾರು ಮೂರು ಸಾವಿರಕ್ಕೂ ಅಧಿಕ ಮಂದಿ ವಿಚಿತ್ರವಾದ ಜ್ವರ ಹಾಗೂ ರಕ್ತಸ್ರಾವದಿಂದ ಬಳಲಿದ್ದರು. ಆದ ಇದನ್ನು ಕೊರಿಯನ್ ಹೆಮರಾಜಿಕ್ ಫೀವರ್ ಎಂದು ಕರೆಯಲಾಗಿತ್ತು. ಇದುವೇ ಹಂಟಾ ವೈರಸ್ ಎನ್ನುವುದು ಧೃಢ ಪಡದಿದ್ದರೂ ನಂತರ 1976ರಲ್ಲಿ ದಕ್ಷಿಣ ಕೊರಿಯಾದ ವಿಜ್ಞಾನಿ ಡಾ. ಹೋ ವಾಂಗ್ ಲೀ ಈ ವೈರಸ್ ಅನ್ನು ಮೊತ್ತಮೊದಲ ಬಾರಿಗೆ ಪತ್ತೆ ಹಚ್ಚಿದರು. ದಕ್ಷಿಣ ಕೊರಿಯಾದಲ್ಲಿ ಹರಿಯುವ ಹಂಟಾನ್ ಎಂಬ ನದಿಯ ತಟದ ಬಳಿ ಪತ್ತೆ ಹಚ್ಚಲಾದ ಇಲಿಗಳಲ್ಲಿ ಮೊತ್ತ ಮೊದಲ ಬಾರಿಗೆ ಈ ವೈರಸ್ ಕಂಡು ಬಂದ ಕಾರಣ ಇದಕ್ಕೆ ಹಂಟಾ ವೈರಸ್ ಎಂದು ಕರೆಯಲಾಯಿತು.

**ಇಲಿಗಳು.:** ಹಂಟಾ ವೈರಸ್‌ಗಳು ಕೊರೊನಾ ವೈರಸ್‌ಗಳಂತೆ ಗಾಳಿಯಲ್ಲಿ ಹರಡುತ್ತವೆ. ಈ ಕಾರಣದಿಂದ ಇದರ ಹರಡುವಿಕೆ ವೇಗ ಪಡೆಯುವ ಸಾಧ್ಯವಿದೆ ಎಂದು ವಿಜ್ಞಾನಿಗಳು ಎಚ್ಚರಿಸಿದ್ದಾರೆ. ವೈರಸ್ ಹೊಂದಿದ ಇಲಿಗಳ ಮಲ, ಮೂತ್ರ, ಜೊಲ್ಲು ಒಣಗಿದಾಗ ಅವು ಧೂಳಿನ ರೂಪದಲ್ಲಿ ಗಾಳಿಯನ್ನು ಸೇರಿಕೊಳ್ಳುತ್ತವೆ. ಈ ಗಾಳಿಯನ್ನು ಉಸಿರಾಡುವ ಮಾನವನ ದೇಹಕ್ಕೆ ವೈರಾಣುಗಳು ಪ್ರವೇಶ ಪಡೆಯುತ್ತವೆ. ಕೇವಲ ಗಾಳಿಯ ಮೂಲಕ ಮಾತ್ರವಲ್ಲ, ಒಂದು ವೇಳೆ ಮಾನವ ವೈರಸ್ ಹೊಂದಿರುವ ಇಲಿಯ ಜೊಲ್ಲು, ಮಲಮೂತ್ರವನ್ನು ಮುಟ್ಟಿ ನಂತರ ಅದೇ ಕೈಗಳಿಂದ ತನ್ನ ಮೂಗು, ಕಣ್ಣು ಅಥವಾ ಬಾಯಿಯನ್ನು ಸಂಪರ್ಕಿಸಿದರೆ ಸೋಂಕು ಹರಡುತ್ತದೆ. ಇದೇ ರೀತಿ ಇಲಿ ಅಥವಾ ಹೆಗ್ಗಣಗಳು ಮನುಷ್ಯರನ್ನು ಕಚ್ಚಿದರೆ ಹಂಟಾ ವೈರಸ್ ಹರಡುವ ಸಾಧ್ಯತೆ ಇದೆಯಂತೆ.

ಹಂಟಾ ವೈರಸ್ ಸೋಂಕು ತಗುಲಿದರೆ ಮೊದಲಿಗೆ ಆ ವ್ಯಕ್ತಿ ವಿಪರೀತ ಸುಸ್ತು, ಜ್ವರ ಮತ್ತು ಸ್ನಾಯು ಸೆಳೆತಗಳಿಂದ ಬಳಲುತ್ತಾನೆ. ನಂತರ ಸೊಂಟ, ಬೆನ್ನು, ತೊಡೆ ಮತ್ತು ಭುಜಗಳಲ್ಲಿ ವಿಪರೀತ ನೋವು ಕಾಣಿಸಿಕೊಳ್ಳಬಹುದು. ತಲೆ ನೋವು, ತಲೆ ಸುತ್ತು, ವಾಂತಿ, ಶೀತ, ಹೊಟ್ಟೆ ನೋವು ಮೊದಲಾದ ಸಮಸ್ಯೆಗಳೂ ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ನಾಲ್ಕರಿಂದ ಹತ್ತು ದಿನಗಳ ನಂತರ ವಿಪರೀತವಾದ ಕೆಮ್ಮು ಮತ್ತು ಉಸಿರಾಟದ ತೊಂದರೆಯ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

ಪ್ರಮುಖವಾಗಿ ಹಂಟಾ ವೈರಸ್ ಮಾನವರಲ್ಲಿ ಎರಡು ರೀತಿಯ ಗಂಭೀರ ಸಮಸ್ಯೆಗಳನ್ನು ಹುಟ್ಟುಹಾಕಬಲ್ಲದು. ಒಂದು ಶ್ವಾಸಕೋಶ ಸಮಸ್ಯೆ ಮತ್ತೊಂದು ಮೂತ್ರ ಪಿಂಡ (ಕಿಡ್ನಿ) ಸಮಸ್ಯೆ. ಈ ಹಂಟಾ ವೈರಸ್ ಸೋಂಕಿನಿಂದ ಒಬ್ಬ ವ್ಯಕ್ತಿ ಗಂಭೀರವಾದ ಶ್ವಾಸಕೋಶದ ಸಮಸ್ಯೆಗೆ ಅಥವಾ ಮೂತ್ರಪಿಂಡದ ವೈಫಲ್ಯದ ಸಮಸ್ಯೆಗೆ ಗುರಿಯಾಗಿ ಸಾವನ್ನಪ್ಪುವ ಸಾಧ್ಯತೆ ಇದೆ.



ಹಂಟಾ ವೈರಸ್ ಸೋಂಕು ಬಾರದಂತೆ ತಡೆಯಲು ನಿರ್ದಿಷ್ಟವಾದ ಯಾವುದೇ ಲಸಿಕೆ ಸದ್ಯಕ್ಕೆ ಲಭ್ಯವಿಲ್ಲ. ಸೋಂಕು ತಗುಲಿದ ಬಳಿಕವೂ ಅದರ ನಿವಾರಣೆಗೆ ಚುಚ್ಚು ಮದ್ದು ಹಾಗೂ ಮಾತ್ರೆಗಳು ಲಭ್ಯವಿಲ್ಲ. ರಿಬಾವಿರಿನ್ ಎನ್ನುವ ಚುಚ್ಚುಮದ್ದು ತಕ್ಕ ಮಟ್ಟಿಗೆ ಪರಿಣಾಮಕಾರಿ ಎಂದು ಸಾಬೀತಾಗಿದ್ದರೂ ಶ್ವಾಸಕೋಶ ಮತ್ತು ಹೃದಯದ ಸೋಂಕಿಗೆ ಇದು ಪರಿಣಾಮಕಾರಿಯಾಗಿಲ್ಲ. ಪ್ರಾರಂಭದಲ್ಲೇ ಸೋಂಕಿನ ಲಕ್ಷಣಗಳನ್ನು ಗುರುತಿಸಿ, ಪರೀಕ್ಷೆಗಳನ್ನು ನಡೆಸಿ ತಕ್ಷಣ ಚಿಕಿತ್ಸೆ ನೀಡಿದರೆ ಆ ವ್ಯಕ್ತಿ ಗುಣಮುಖರಾಗುವ ಸಾಧ್ಯತೆ ಇದೆ.



2008ರಲ್ಲಿ ಭಾರತದ ತಮಿಳುನಾಡಿನ ಒಂದು ಬುಡಕಟ್ಟು ಜನಾಂಗದಲ್ಲಿ ಈ ಹಂಟಾ ವೈರಸ್ ಪತ್ತೆಯಾಗಿತ್ತು ಎಂದು ಅಧ್ಯಯನ ವರದಿಗಳು ತಿಳಿಸುತ್ತವೆ. ಆ ಬುಡಕಟ್ಟು ಜನಾಂಗ ಹಾವು ಮತ್ತು ಇಲಿಗಳನ್ನು ಹಿಡಿಯುತ್ತಿದ್ದುದರಿಂದ ಅವರಿಗೆ ಹಂಟಾ ವೈರಸ್ ತಗುಲಿರಬಹುದೆಂದು ಅಂದಾಜಿಸಲಾಗಿತ್ತು. ಮುಂಬಯಿ ಮತ್ತು ದಕ್ಷಿಣ ಭಾರತದ ಕೆಲವು ಪ್ರದೇಶಗಳಲ್ಲಿ ಹಂಟಾ ವೈರಸ್ ಪತ್ತೆ ಆಗಿತ್ತು. ಆಗ ಈ ಸೋಂಕಿಗೆ ಗುರಿಯಾದವರು ಬಹುತೇಕ ಗೋಡೌನ್‌ಗಳಲ್ಲಿ ಕೆಲಸ ಮಾಡುವವರಾಗಿದ್ದರು. ಈ ಹಂಟಾ ವೈರಸ್‌ಗೆ ನಿರ್ದಿಷ್ಟವಾದ ಮದ್ದುಗಳು ಇಲ್ಲದೇ ಇರುವುದರಿಂದ ಮುನ್ನೆಚ್ಚರಿಕೆ ತೆಗೆದುಕೊಂಡು ಜೀವನ ಸಾಗಿಸುವುದು ಬಹುಮುಖ್ಯ. ಈ ವೈರಸ್ ಸೋಂಕಿನಿಂದಾಗುವ ಸಾವಿನ ಪ್ರಮಾಣ ಶೇ 50 ರಷ್ಟಿರುವುದರಿಂದ ಜಾಗೃತೆಯಾಗಿರುವುದು ಬಹು ಮುಖ್ಯ. ಇಲಿಗಳ ವಾಸ ತಾಣಗಳನ್ನು ಗುರುತಿಸಿ ಅವುಗಳನ್ನು ನಿವಾರಿಸಬೇಕು. ಅವುಗಳ ತ್ಯಾಜ್ಯಗಳನ್ನು ಸೋಂಕು ನಿವಾರಕ ದ್ರಾವಣದಿಂದ ಸ್ವಚ್ಛಗೊಳಿಸಬೇಕು. ಇನ್ನೂ ಈ ಹಂಟಾ ವೈರಸ್ ಭಾರತಕ್ಕೆ ಪ್ರವೇಶ ಮಾಡದೇ ಇದ್ದರೂ ನಾವು ಈಗಲೇ ಜಾಗರೂಕರಾಗಿರುವುದು ಉತ್ತಮ.

– **ಕೆ.ಪಿ.ಅಶ್ವಿನ್ ರಾವ್**
(ಸಯನ್ಸ್‌ನ್ಯೂಸ್ ಮತ್ತು ಎನ್ ಡಿ ಟಿ ವಿ ಜಾಲತಾಣಗಳು)

# ಕರಿ ಎದೆಯ ನೆಲ ಗುಬ್ಬಿ

» **ಬಯಲು ಸೀಮೆಯಲ್ಲಿ ಏನೂ ಇರುವುದಿಲ್ಲ, ಅಲ್ಲಿ ನೀರಿಗೂ ಬರಗಾಲ ಏನೂ ಬೆಳೆಯುವುದಿಲ್ಲ ಎಂದುಕೊಂಡಿದ್ದ ನನಗೆ ಅಲ್ಲಿನ ಪರಿಸರಕ್ಕೆ ಹೊಂದಿಕೊಂಡು ಬದುಕುವ ಅನೇಕ ಗಿಡ ಮರ ಪ್ರಾಣಿ ಪಕ್ಷಿಗಳನ್ನು ನೋಡಿ ಆಶ್ಚರ್ಯವಾಯಿತು. ಅತ್ಯಂತ ಅಪರೂಪದ, ಸುಂದರ ಕೊಂಬಿನ ಕೃಷ್ಣಮೃಗಗಳೂ ಅಲ್ಲಿ ಸ್ವಚ್ಛಂದವಾಗಿ ಮೇಯುವುದನ್ನು ನೋಡಿ ಬಹಳ ಸಂತೋಷವಾಯಿತು.**

ನಾನು ಸರಕಾರಿ ಶಾಲಾ ಶಿಕ್ಷಕನಾಗಿ ಕೆಲಸಕ್ಕೆ ಸೇರಿದ ಹೊಸತರಲ್ಲಿ ನಮಗೊಂದು ತರಬೇತಿಗೆ ನಿಯೋಜನೆ ಮಾಡಿದ್ದರು. ಕೇವಲ ಗಣಿತ ಮತ್ತು ವಿಜ್ಞಾನ ಶಿಕ್ಷಕರಿಗಾಗಿ ಮಾತ್ರ ಈ ತರಬೇತಿ ಇತ್ತು. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಮಲ್ಲನಾಯಕನ ಹಟ್ಟಿಯ ಹತ್ತಿರ ಖುದಾಪುರ ಎಂಬ ಹಳ್ಳಿ, ಆ ಹಳ್ಳಿಯಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯ ತರಬೇತಿ ಕೇಂದ್ರ. ಅಲ್ಲಿ ನಮಗೆ ಹತ್ತು ದಿನಗಳ ತರಬೇತಿ. ಚಳ್ಳಕೆರೆ ತಲುಪಿ, ಅಲ್ಲಿಂದ ಖುದಾಪುರದ ಕಡೆಗೆ ಹೋಗುವ ಬಸ್ಸು ಹತ್ತಿ ಹೊರಟೆವು. ಏರುತಗ್ಗುಗಳಿಲ್ಲದ ಬಟಾ ಬಯಲು. ಜೂನ್ ತಿಂಗಳ ಸಮಯ. ಕರಾವಳಿಯಲ್ಲಿ ಆಗಲೇ ಮಳೆ ಪ್ರಾರಂಭ ಆಗಿದ್ದರೂ ಇಲ್ಲಿ ಮಳೆಯ ಸುಳಿವೇ ಇರಲಿಲ್ಲ. ನೆಲವೆಲ್ಲ ಕಾದು ಕೆಂಪಗೆ ಕಾಣುತ್ತಿತ್ತು. ಮರಗಳೂ ಬಹಳ ವಿರಳ. ದಖ್ಖನ್ ಪ್ರಸ್ಥಭೂಮಿ ಎಂದು ನಾವು ನಮ್ಮ ಶಾಲಾ ದಿನಗಳಲ್ಲಿ ಓದಿದ್ದರೂ ಅದು ಹೇಗಿರುತ್ತದೆ ಎಂಬ ನಿಜವಾದ ಅನುಭವ ನಮಗೆ ಆಗಲಾರಂಭವಾಗಿತ್ತು.

ಬೆಳಗ್ಗಿನಿಂದ ಸಂಜೆಯವರೆಗೂ ಬಹಳ ಸೊಗಸಾದ ತರಗತಿಗಳನ್ನು ನಡೆಸುತ್ತಿದ್ದರು. ತರಬೇತಿ ಕೇಂದ್ರದಿಂದ ಸ್ವಲ್ಪ ದೂರದಲ್ಲಿ ನಮ್ಮ ಹಾಸ್ಟೆಲ್‌ಗಳು ಇದ್ದವು. ಹಾಸ್ಟೆಲ್‌ನಿಂದ ಬೆಳಗ್ಗೆ ಬರುವಾಗ ಸಂಜೆ ಹೋಗುವಾಗ ಬಯಲುನಾಡಿನ ಸುಂದರ ದೃಶ್ಯವನ್ನು ಕಣ್ಣುತುಂಬಿಕೊಳ್ಳುವುದು ಸಾಧ್ಯವಾಗುತ್ತಿತ್ತು. ಅಲ್ಲಿನ ಮ್ಯಾನೇಜರ್ ಗಜಾನನ ಎಂಬವರ ಪರಿಚಯವಾಯಿತು. ನನ್ನ ಫೋಟೋಗ್ರಫಿಯ ಆಸಕ್ತಿ ತಿಳಿದು ಬೆಳಗ್ಗೆ ವಾಕಿಂಗ್ ಹೋಗ್ತೇವೆ ನೀವೂ ಬನ್ನಿ, ಇಲ್ಲಿ ಹಲವಾರು ಬಗೆಯ ಹಕ್ಕಿಗಳು ನೋಡಲು ಸಿಗುತ್ತವೆ ಎಂದು ಕರೆದರು. ಬಯಲು ಸೀಮೆಯಲ್ಲಿ ಏನೂ ಇರುವುದಿಲ್ಲ, ಅಲ್ಲಿ ನೀರಿಗೂ ಬರಗಾಲ ಏನೂ ಬೆಳೆಯುವುದಿಲ್ಲ ಎಂದುಕೊಂಡಿದ್ದ ನನಗೆ ಅಲ್ಲಿನ ಪರಿಸರಕ್ಕೆ ಹೊಂದಿಕೊಂಡು ಬದುಕುವ ಅನೇಕ ಗಿಡ ಮರ ಪ್ರಾಣಿ ಪಕ್ಷಿಗಳನ್ನು ನೋಡಿ ಆಶ್ಚರ್ಯವಾಯಿತು. ಅತ್ಯಂತ ಅಪರೂಪದ, ಸುಂದರ ಕೊಂಬಿನ ಕೃಷ್ಣಮೃಗಗಳೂ ಅಲ್ಲಿ ಸ್ವಚ್ಛಂದವಾಗಿ ಮೇಯುವುದನ್ನು ನೋಡಿ ಬಹಳ ಸಂತೋಷವಾಯಿತು.

ಒಂದು ದಿನ ಪ್ರಯೋಗಾಲಯ ತರಗತಿಗಳು ಬೇಗನೆ ಮುಗಿದು ಬಿಡುವಾದ್ದರಿಂದ ಅಲ್ಲೇ ಅಡ್ಡಾಡಿಕೊಂಡು ಬರೋಣ ಎಂದು ನನ್ನ ಕ್ಯಾಮರಾ ತೆಗೆದುಕೊಂಡು ಹೊರಟೆ. ಅಲ್ಲೇ ಸ್ವಲ್ಪದೂರ ಒಣಭೂಮಿಯಲ್ಲಿ ಯಾವುದೋ ಪುಟ್ಟ ಹಕ್ಕಿ ನಡೆದಾದಿದ ಹಾಗೆ ಕಾಣಿಸಿತು. ಆದರೆ ನೆಲದ ಮೇಲೆ ಹೊಟ್ಟೆ ಊರಿ ಅದು ಕುಳಿತುಬಿಟ್ಟರೆ ಹಕ್ಕಿ ಎಲ್ಲಿದೆ ಎಂದು ಗುರುತಿಸುವುದೇ ಕಷ್ಟವಾಗುತ್ತಿತ್ತು. ಸುಮಾರು ಗುಬ್ಬಚ್ಚಿಯ ಗಾತ್ರದ ಹಕ್ಕಿ. ದೇಹವೆಲ್ಲಾ ಮರಳು ಮಣ್ಣಿನಂತೆ ಬೂದು ಬಣ್ಣ. ಕತ್ತು, ಎದೆ ಮತ್ತು ಹೊಟ್ಟೆಯ ಭಾಗಗಳು ಕಪ್ಪು ಬಣ್ಣ, ತಲೆಯ ಮೇಲೂ ಅದೇ ಬೂದುಬಣ್ಣ. ಗುಬ್ಬಚ್ಚಿಯಂತಹ ಕೊಕ್ಕು.



ನೆಲದಮೇಲೆ ಬಿದ್ದಿರಬಹುದಾದ ಸಣ್ಣಪುಟ್ಟ ಕಾಳುಗಳನ್ನು ಹಕ್ಕಿ ತಿನ್ನುತ್ತಿತ್ತು. ಕೆಲವೊಮ್ಮೆ ಎತ್ತರಕ್ಕೆ ಹಾರಿ ಆಕಾಶದಲ್ಲಿ ಸರ್ಕಸ್ ಮಾಡಿ ಮತ್ತೆ ನೆಲದ ಮೇಲೆ ಕುಳಿತುಬಿಡುತ್ತಿತ್ತು. ಹೆಣ್ಣು ಹಕ್ಕಿಗೆ ಎದೆ ಮತ್ತು ಕತ್ತಿನ ಸುತ್ತ ಈ ಕಪ್ಪು ಬಣ್ಣ ಇರಲಿಲ್ಲ. ಹಕ್ಕಿ ಯಾವುದೆಂದು ತಿಳಿಯಲು ಬೇಕಾಗಿ ಒಂದೆರಡು ಫೋಟೋ ತೆಗೆದುಕೊಂಡು ಊರಿಗೆ ಬಂದ ನಂತರ ಪುಸ್ತಕದಲ್ಲಿ ಇದರ ಬಗ್ಗೆ ಹುಡುಕಿದೆ.

ಭಾರತದ ಹಿಮಾಲಯ ಮತ್ತು ಪಶ್ಚಿಮಘಟ್ಟಗಳನ್ನು ಹೊರತುಪಡಿಸಿ ಬಹುತೇಕ ಎಲ್ಲ ಕಡೆ ಈ ಹಕ್ಕಿ ನೋಡಲು ಸಿಗುತ್ತದೆ. ಒಣಭೂಮಿಗಳಲ್ಲಿ, ಹೊಲಗಳಲ್ಲಿ ಈ ಹಕ್ಕಿ ವಾಸಮಾಡುತ್ತದೆ. ಗುಬ್ಬಚ್ಚಿಯಂತೆ ಕಾಳುಗಳೇ ಇದರ ಮುಖ್ಯ ಆಹಾರ. ಹೊಲಗಳಲ್ಲಿ ಅಥವಾ ಒಣಭೂಮಿಯ ಕುರುಚಲು ಪೊದೆಗಳ ನಡುವೆ, ಹೊಲಗಳಲ್ಲಿ ಈ ಹಕ್ಕಿ ಗೂಡು ಮಾಡಿ ಸಂತಾನಾಭಿವೃದ್ಧಿ ಮಾಡುತ್ತದೆ. ಗುಬ್ಬಚ್ಚಿಯ ಜಾತಿಯಲ್ಲೂ ಎಷ್ಟೊಂದು ವಿಧಗಳು ಎಂದು ತಿಳಿದು ನಿಜಕ್ಕೂ ನನಗೆ ಆಶ್ಚರ್ಯವಾಯಿತು.

– **ಅರವಿಂದ ಕುಡ್ಲ,**
ಬಂಟ್ವಾಳ

## ನಾಳೆ ವಿದ್ಯುತ್ ವ್ಯತ್ಯಯ

**ಹಾಸನ:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಹೊಳೆನರಸೀಪುರ ನೋಡಲ್ ಕೇಂದ್ರ ವ್ಯಾಪ್ತಿಯ 66/11ಕೆ.ವಿ.ವಿ ಕೇಂದ್ರ, ದೊಡ್ಡಕಾಡನೂರು ಮತ್ತು ದೊಡ್ಡಹಳ್ಳಿ ತ್ರೈಮಾಸಿಕ ನಿರ್ವಹಣಾ ಕೆಲಸಗಳನ್ನು ಹಮ್ಮಿಕೊಂಡಿರುವುದರಿಂದ ಮೇ 13 ರಂದು ಬೆಳ್ಳಗೆ 10 ರಿಂದ ಸಂಜೆ 5 ರವರೆಗೆ ದೊಡ್ಡಕಾಡನೂರು ಶಾಖಾ ವ್ಯಾಪ್ತಿಯ ಗ್ರಾಮಗಳಾದ ದೊಡ್ಡಕಾಡ ನೂರು, ಸಿ.ಹಿಂದಲಹಳ್ಳಿ, ಹಿರಿ ತಳಾಲು, ಬಾಚಹಳ್ಳಿ, ಕಬ್ಬರು, ಕಲ್ಲೊಡೆಬೋರೆ ಕಾವಲ್, ದಾಳಗೌಡನಹಳ್ಳಿ, ನಗರನಹಳ್ಳಿ, ರಂಗೇನಹಳ್ಳಿ ಮರಹಳ್ಳಿ, ಹಾಗೂ ದೊಡ್ಡಹಳ್ಳಿ ವಿ.ವಿ.ಕೇಂದ್ರ ವ್ಯಾಪ್ತಿಯ ಗ್ರಾಮಗಳಾದ ಸಂತೆ ಮೈದಾನ, ರಾಗಿಹಳ್ಳಿಕಾವಲು. ಚೌಡಸಮುದ್ರ, ಬೀಕನಹಳ್ಳಿ. ಆಲೇನಹಳ್ಳಿ. ಮುಂಜನ ಹಳ್ಳಿ. ಗುಳವಿನಅತ್ತಿಗುಪ್ಪೆ, ಅರೆಕೆರೆ. ಯಡೆಗೌಡನಹಳ್ಳಿ, ಹಾಗು ಸುತ್ತ ಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು ಸಾರ್ವಜನಿಕರು ಸಹಕರಿಸುವಂತೆ ಕಾರ್ಯ ನಿರ್ವಾಹಕ ಇಂಜಿನಿಯರ್ ಅವರು ತಿಳಿಸಿದ್ದಾರೆ.

# ಮಿತವ್ಯಯಕ್ಕಾಗಿ ಪ್ರಧಾನಿ ಮೋದಿ ಸಲಹೆ ಸ್ವಾಗತಿಸಿ

**ಅಮೆರಿಕ- ಇರಾನ್ ಯುದ್ಧದ ಪರಿಣಾಮದಿಂದ ಪ್ರತಿಕೂಲ ಪರಿಣಾಮ | ದೇಶದ ಜನರಿಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಮನವಿ**

• ಪ್ರಜೋದಯ ವರದಿ

**ಬೆಂಗಳೂರು:** ಪಶ್ಚಿಮ ಏಷ್ಯಾ ಸಂಘರ್ಷದ ಪರಿಣಾಮದ ನಡುವೆ ಇಂಧನ ಉಳಿತಾಯ ಮತ್ತು ವಿದೇಶಿ ವಿನಿಮಯ ಸಂರಕ್ಷಣೆಗಾಗಿ ಪ್ರಧಾನಿ ನರೇಂದ್ರ ಮೋದಿಯವರ ಮನವಿಯನ್ನು ಸ್ವಾಗತಿಸಬೇಕು ಎಂದು ಜೆಡಿ(ಎಸ್) ಸರ್ವೋಚ್ಚ ನಾಯಕ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಹೇಳಿದ್ದಾರೆ.

ಸಂಘರ್ಷದಿಂದ ಉಂಟಾದ ಜಾಗತಿಕ ಬಿಕ್ಕಟ್ಟಿನ ನಡುವೆ ಇಂಧನ ಹಾಗೂ ಭಾರತ ಆಮದು ಮಾಡಿಕೊಳ್ಳುತ್ತಿರುವ ಇನ್ನಿತರ ವಸ್ತುಗಳ ಬಳಕೆಯಲ್ಲಿ ಎಚ್ಚರಿಕೆ ವಹಿಸುವಂತೆ ಮೋದಿ ಸಲಹೆ ನೀಡಿದ್ದಾರೆ ಎಂದು ಮಾಜಿ ಪ್ರಧಾನಿ ಹೇಳಿದ್ದಾರೆ.

ನಿನ್ನೆ ತೆಲಂಗಾಣದಲ್ಲಿ ಪ್ರಧಾನಿ ಕೆಲವು ಸಲಹೆಗಳನ್ನು ನೀಡಿದರು. ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ಯುದ್ಧದ ಪ್ರತಿಕೂಲ ಪರಿಣಾಮದಿಂದಾಗಿ, ಇಂಧನ ಸಾಗಿಸುವ ಹಡಗುಗಳ ಚಲನೆಯಲ್ಲಿ ಅಡಚಣೆ ಉಂಟಾಗಿದೆ. ಈ ಹಿನ್ನೆಲೆಯಲ್ಲಿ, ಬಳಕೆಯಲ್ಲಿ ಎಚ್ಚರಿಕೆ ವಹಿಸುವಂತೆ ಮೋದಿ ಸಲಹೆ ನೀಡಿದ್ದಾರೆ ಎಂದು ದೇವೇಗೌಡ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಧಾನಿಯವರ ಮನವಿ ಭಾರತದ ಸುಮಾರು 150 ಕೋಟಿ ಜನರಿಗೆ ಉದ್ದೇಶಿಸಲಾಗಿದೆ, ಈ ಮನವಿ ಬೇರೆ ಯಾವುದೇ ಕಾರಣಕ್ಕಾಗಿ ಅಲ್ಲ. ಅಂತರರಾಷ್ಟ್ರೀಯ ಮಟ್ಟದಲ್ಲಿ ಸಂಘರ್ಷದ ಪರಿಣಾಮದಿಂದಾಗಿ ಬಂದಿದೆ. ನಾವು ಅದನ್ನು ಸ್ವಾಗತಿಸಬೇಕು ಎಂದು ಅವರು ಹೇಳಿದರು.

ಪಶ್ಚಿಮ ಏಷ್ಯಾ ಸಂಘರ್ಷದ ಪ್ರತಿಕೂಲ ಪರಿಣಾಮಗಳಿಂದ ಜನರನ್ನು ರಕ್ಷಿಸಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ ಎಂದು ಒತ್ತಿ ಹೇಳಿದ ಮೋದಿ, ಭಾನುವಾರ ಹೈದರಾಬಾದ್‌ನಲ್ಲಿ ಆರ್ಥಿಕತೆಯನ್ನು ಬಲಪಡಿಸಲು ಇಂಧನದ ವಿವೇಚನಾಯುಕ್ತ ಬಳಕೆ, ಚಿನ್ನದ ಖರೀದಿಯನ್ನು ಮುಂದೂಡುವುದು ಮತ್ತು ವಿದೇಶಿ ಪ್ರಯಾಣವನ್ನು ಕಡಿಮೆ ಮಾಡುವುದು ಸೇರಿದಂತೆ ಇತರ ಕ್ರಮಗಳಿಗೆ ಕರೆ ನೀಡಿದರು.





ತೆಲಂಗಾಣ ಬಿಜೆಪಿ ಆಯೋಜಿಸಿದ್ದ ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಅವರು, ಪೆಟ್ರೋಲ್ ಮತ್ತು ಡೀಸೆಲ್ ಬಳಕೆಯನ್ನು ಕಡಿಮೆ ಮಾಡುವುದು, ನಗರಗಳಲ್ಲಿ ಮೆಟ್ರೋ ರೈಲು ಸೇವೆಗಳನ್ನು ಬಳಸುವುದು, ಕಾರ್‌ಪೂಲಿಂಗ್, ಎಲೆಕ್ಟ್ರಿಕ್ ವಾಹನಗಳ (ಇವಿ) ಬಳಕೆಯನ್ನು ಹೆಚ್ಚಿಸುವುದು, ಪಾರ್ಸೆಲ್ ಸಾಗಣೆಗೆ ರೈಲ್ವೆ ಸೇವೆಗಳನ್ನು ಬಳಸುವುದು ಮತ್ತು ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟಿನ ನಡುವೆ ವಿದೇಶಿ ವಿನಿಮಯವನ್ನು ಸಂರಕ್ಷಿಸಲು ಮನೆಯಿಂದ ಕೆಲಸ ಮಾಡುವ ಸಲಹೆಗಳನ್ನು ಸೂಚಿಸಿದ್ದಾರೆ.

ಬಿಕ್ಕಟ್ಟಿನಿಂದಾಗಿ ವಿದೇಶಿ ವಿನಿಮಯವನ್ನು ಉಳಿಸುವ ಅಗತ್ಯವನ್ನು ಒತ್ತಿ ಹೇಳಿದ ಮೋದಿ, ಚಿನ್ನದ ಖರೀದಿ ಮತ್ತು ವಿದೇಶಿ ಪ್ರಯಾಣವನ್ನು ಒಂದು ವರ್ಷದವರೆಗೆ ಮುಂದೂಡಬೇಕೆಂದು ಕರೆ ನೀಡಿದರು. ಕೇಂದ್ರ, ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಪ್ರಧಾನಿಯವರ ಮನವಿಯು ದೇಶದ ಹಿತಾಸಕ್ತಿಗಾಗಿ ಮತ್ತು ಪಶ್ಚಿಮ ಏಷ್ಯಾ ಸಂಘರ್ಷದ ನಡುವೆ ವಿದೇಶಿ ವಿನಿಮಯ ಮೀಸಲುಗಳನ್ನು ಸಂರಕ್ಷಿಸುವ ಗುರಿಯನ್ನು ಹೊಂದಿದೆ ಎಂದು ಹೇಳಿದ್ದಾರೆ. ಕಳೆದ ಎರಡು ವರ್ಷಗಳಿಂದ ಪ್ರಧಾನ ಮಂತ್ರಿಯವರು ಖಾದ್ಯ ತೈಲದ ಬಳಕೆಯನ್ನು ಕಡಿಮೆ ಮಾಡುವ ಬಗ್ಗೆ ಮಾತನಾಡುತ್ತಿದ್ದಾರೆ ಏಕೆಂದರೆ ನಾವು ಅದರಲ್ಲಿ ಸ್ವಾವಲಂಬಿಗಳಾಗಿಲ್ಲ. ನಾವು ಖಾದ್ಯ ತೈಲದ ಶೇಕಡಾ 70 ರಷ್ಟು ಹೊರಗಿನಿಂದ ಆಮದು ಮಾಡಿಕೊಳ್ಳುತ್ತೇವೆ. ಅದನ್ನು ಕಡಿಮೆ ಮಾಡುವುದರಿಂದ ನಮಗೆ ವಿದೇಶಿ ವಿನಿಮಯವನ್ನು ಉಳಿಸಲು ಸಹಾಯವಾಗುತ್ತದೆ ಮತ್ತು ಆರೋಗ್ಯಕ್ಕೂ ಪ್ರಯೋಜನಕಾರಿಯಾಗಿದೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಪೆಟ್ರೋಲಿಯಂ ಉತ್ಪನ್ನಗಳು ಮತ್ತು ರಸಗೊಬ್ಬರಗಳಲ್ಲಿ ದೇಶ ಸ್ವಾವಲಂಬಿಯಾಗಿಲ್ಲ ಎಂದು ಅವರು ಹೇಳಿದರಲ್ಲದೆ, ಅವುಗಳ ವಿವೇಚನಾಯುಕ್ತ ಬಳಕೆಯು ವಿದೇಶಿ ವಿನಿಮಯ ಮೀಸಲುಗಳನ್ನು ಸಂರಕ್ಷಿಸಲು ಸಹಾಯ ಮಾಡುತ್ತದೆ ಎಂದು ದೇವೇಗೌಡ ಹೇಳಿದರು.

## ಆಪ್ತ ಸಹಾಯಕ ಹತ್ಯೆ ಪ್ರಕರಣ : ಮೂವರ ಬಂಧನ

**ಪಾಟ್ನಾ:** ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರ ಆಪ್ತ ಸಹಾಯಕ (ಪಿಎ) ಚಂದ್ರನಾಥ್ ರಥ್ ಹತ್ಯೆಯಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಬಿಹಾರದ ಬಕ್ಸಾರ್ ಜಿಲ್ಲೆಯಿಂದ ಮೂವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳದ ವಿಶೇಷ ಕಾರ್ಯಪಡೆ ಪೊಲೀಸರು, ಕ್ರಿಮಿನಲ್ ವಿಶಾಲ್ ಶ್ರೀವಾಸ್ತವ ಸೇರಿದಂತೆ ಮೂವರು ಶಂಕಿತರನ್ನು ಬಕ್ಸಾರ್‌ನಿಂದ ಬಂಧಿಸಿ ಪಶ್ಚಿಮ ಬಂಗಾಳಕ್ಕೆ ಕರೆತಂದಿದ್ದಾರೆ ಎಂದು ವರದಿಯಾಗಿದೆ.

ಬಂಧಿತ ವಿಶಾಲ್ ವಿರುದ್ಧ ಕೊಲೆ ಮತ್ತು ದರೋಡೆ ಸೇರಿದಂತೆ 22 ಕ್ಕೂ ಹೆಚ್ಚು ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ.ಇತರ ಇಬ್ಬರನ್ನು ಮಾಯಾಂಕ್ ಮಿಶ್ರಾ ಮತ್ತು ವಿಕ್ಕಿ ಮೌರ್ಯ ಎಂದು ಗುರುತಿಸಲಾಗಿದೆ. ಆದಾಗ್ಯೂ, ಅವರ ಬಂಧನದ ಬಗ್ಗೆ ಇನ್ನೂ ಅಧಿಕೃತಗೊಳಿಸಿಲ್ಲ.

# ಮೇ 19 ರವರೆಗೆ ನಾಲೆಗಳಿಗೆ ನೀರು

## ನಾಲಾ ವ್ಯಾಪ್ತಿಯ ಸಾರ್ವಜನಿಕರಿಗೆ ಎಚ್ಚರಿಕೆ

• ಪ್ರಜೋದಯ ವರದಿ

**ಹಾಸನ:** ಕುಡಿಯುವ ನೀರಿಗಾಗಿ ಹೇಮಾವತಿ ಯೋಜನಾ ವ್ಯಾಪ್ತಿಯ ಕುಡಿಯುವ ನೀರಿನ ಬೇಡಿಕೆ/ಅವಶ್ಯಕತೆಗೆ ಅನುಗುಣವಾಗಿ, ನಿಗಧಿತ ಪ್ರಮಾಣದಲ್ಲಿ ನಿಯಮಿತವಾಗಿ ಹೇಮಾವತಿ ಜಲಾಶಯದಿಂದ ನಾಲೆಗಳ ಮೂಲಕ ನೀರನ್ನು ಹೇಮಾವತಿ ಎಡದಂಡೆ ನಾಲೆಯ ಮೂಲಕ ಮೇ.19 ರವರೆಗೆ ಹರಿಸಲಾಗುವುದು.

ನಾಲೆಗಳಲ್ಲಿ ನೀರನ್ನು ಹರಿಸುವ ಅವಧಿಯು ತಾತ್ಕಾಲಿಕವಾಗಿದ್ದು, ಹೇಮಾವತಿ ಜಲಾನಯನ ಹಾಗೂ ಯೋಜನಾ ವ್ಯಾಪ್ತಿಯ ಅಚ್ಚುಕಟ್ಟು ಪ್ರದೇಶದಲ್ಲಿ ಪೂರ್ವ ಮುಂಗಾರು ಮಳೆಯ ಸ್ಥಿತಿಗತಿಗಳನ್ನು ಅವಲೋಕಿಸಿ ಕುಡಿಯುವ ನೀರಿಗಾಗಿ ನಾಲೆಗಳ ಮೂಲಕ ನೀರನ್ನು ಹರಿಸಲು/ನಿಲ್ಲಿಸಲು ಅಗತ್ಯ ಕ್ರಮವಹಿಸಲಾಗುವುದು, ಕುಡಿಯುವ ನೀರಿಗಾಗಿ



ಮೀಸಲಿಟ್ಟಿರುವ ಪ್ರಮಾಣದಷ್ಟು ನೀರನ್ನು ಹೇಮಾವತಿ ಜಲಾಶಯದಿಂದ ನಾಲೆ ಮೂಲಕ ಹರಿಸಲಾಗುವುದು.

ಪ್ರಸ್ತುತ ನೀರಿನ ಅಭಾವವಿದ್ದು, ಈ ನೀರನ್ನು ಅಚ್ಚುಕಟ್ಟು ವ್ಯಾಪ್ತಿಯಲ್ಲಿನ ಯಾವುದೇ ಕೃಷಿ ಚಟುವಟಿಕೆಗಳಿಗೆ ಬಳಸತಕ್ಕದ್ದಲ್ಲ, ಈ ಸಂದರ್ಭದಲ್ಲಿ ಯೋಜನಾ ವ್ಯಾಪ್ತಿಯಲ್ಲಿನ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ನೀರು ಪೋಲಾಗದಂತೆ ಎಲ್ಲಾ ತುರ್ತು ಕ್ರಮ ತೆಗೆದುಕೊಂಡು, ಹೇಮಾವತಿ ಯೋಜನಾ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕರು ಹಾಗೂ ರೈತರಿಗೆ ಸೂಕ್ತ ತಿಳುವಳಿಕೆ ನೀಡಿ, ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸೂಚಿಸಲಾಗಿದೆ.

ಈ ಬಗ್ಗೆ ಯೋಜನಾ ವ್ಯಾಪ್ತಿಯಲ್ಲಿನ ಎಲ್ಲಾ ಸಾರ್ವಜನಿಕರು ಮತ್ತು ಅಚ್ಚುಕಟ್ಟುದಾರರು ಸುಗಮ ನೀರು ನಿರ್ವಹಣೆ ನಡೆಸುವ ನಿಟ್ಟಿನಲ್ಲಿ ಇಲಾಖಾ ಅಧಿಕಾರಿಗಳೊಂದಿಗೆ ಸಹಕರಿಸಬೇಕೆಂದು ಚನ್ನರಾಯಪಟ್ಟಣ ಹೇಮಾವತಿ ನಾಲಾ ವೃತ್ತ ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪಾರದರ್ಶಕವಾಗಿ ಅಂಗಡಿ ಮಳಿಗೆಗಳ ಹರಾಜು ಪ್ರಕ್ರಿಯೆ

## 6 ಮಳಿಗೆಗಳಿಂದ ವಾರ್ಷಿಕ 62 ಲಕ್ಷ ರೂಪಾಯಿ ಆದಾಯ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕು ಪಂಚಾಯತಿ ಅಂಗಡಿ ಮಳಿಗೆಗಳ ಹರಾಜು ಪ್ರಕ್ರಿಯೆಯನ್ನು ಸಾರ್ವಜನಿಕರ ಒತ್ತಾಯದ ಮೇರೆಗೆ ಸಂಪೂರ್ಣ ಪಾರದರ್ಶಕವಾಗಿ ನಡೆಸಲಾಗಿದೆ ಎಂದು ತಾಲ್ಲೂಕು ಪಂಚಾಯತಿ ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಾಹಕಾಧಿಕಾರಿ ಸತೀಶ್ ತಿಳಿಸಿದ್ದಾರೆ.

ಹಿಂದೆ ಇದ್ದ ಎಲ್ಲಾ ಬಾಡಿಗೆದಾರರನ್ನು ಖಾಲಿ ಮಾಡಿಸಿ, ಲೈವ್ ಬಿಡ್ಡಿಂಗ್ ಮೂಲಕ ಬಹಿರಂಗ ಹರಾಜು ನಡೆಸಲಾಗಿದ್ದು, ಒಟ್ಟು 16 ಅಂಗಡಿ ಮಳಿಗೆಗಳನ್ನು ಹರಾಜಿಗೆ ಇಡಲಾಗಿತ್ತು. ಇದರಲ್ಲಿ 3 ಮಳಿಗೆಗಳನ್ನು ಪರಿಶಿಷ್ಟ ಜಾತಿ, 1 ಮಳಿಗೆಯನ್ನು ಪರಿಶಿಷ್ಟ ಪಂಗಡ ಹಾಗೂ 1 ಮಳಿಗೆಯನ್ನು ಅಂಗವಿಕಲರಿಗೆ ಮೀಸಲಿಡಲಾಗಿತ್ತು ಎಂದು ಮಾಹಿತಿ ನೀಡಿದರು.

ಹರಾಜಿನಲ್ಲಿ ಮಳಿಗೆಗಳ ಬಾಡಿಗೆ ಮೊತ್ತವು 11 ಸಾವಿರ ರೂ.ದಿಂದ 55,600ರ ರೂ.ವರೆಗೆ ಬಾಡಿಗೆ ಹರಾಜು ಹೋಗಿದೆ, ಈ 16 ಮಳಿಗೆಗಳಿಂದ ತಾಲೂಕು ಪಂಚಾಯತಿಗೆ ಪ್ರತಿ ತಿಂಗಳು ಒಟ್ಟು 5 ಲಕ್ಷ ರೂ. ಬಾಡಿಗೆ ರೂಪದಲ್ಲಿ ಆದಾಯ ಬರಲಿದೆ. ಇದರಿಂದ ವಾರ್ಷಿಕವಾಗಿ ಟ್ಯಾಕ್ಸ್ ಸೇರಿ ಸುಮಾರು 62 ಲಕ್ಷ ರೂ. ಆದಾಯ ಲಭ್ಯವಾಗಲಿದೆ. ಜೊತೆಗೆ ತಕ್ಷಣವೇ ಸುಮಾರು 54 ಲಕ್ಷ ರೂ. ಠೇವಣಿ ರೂಪದಲ್ಲಿ ತಾಲೂಕು ಪಂಚಾಯತಿಗೆ ಹಣ ಬರಲಿದೆ ಎಂದು ಅವರು ತಿಳಿಸಿದರು.

> ಈ ಹಿಂದೆ ಜನಪ್ರತಿನಿಧಿಗಳಿದ್ದ ಆಡಳಿತ ಮಂಡಳಿ ಸಂದರ್ಭದಲ್ಲಿ ಎಲ್ಲಾ ಮಳಿಗೆಗಳಿಂದ ಕೇವಲ ವರ್ಷಕ್ಕೆ 6 ಲಕ್ಷ ಮಾತ್ರ ಆದಾಯ ಬರುತ್ತಿತ್ತು ಆದರೆ ಈ ವರ್ಷ ಶಾಸಕರ ಮಾಮಾರ್ಗದರ್ಶನದಲ್ಲಿ ಜನಪ್ರತಿನಿಧಿಗಳ ಆಡಳಿತ ಮಂಡಳಿ ಇಲ್ಲದ ಕಾರಣ ಅಧಿಕಾರಿಗಳ ಸಮ್ಮುಖದಲ್ಲಿ ಇ ಟೆಂಡರ್ ಕರೆಯುವ ಮೂಲಕ ಪಾರದರ್ಶಕವಾಗಿ ಅಂಗಡಿ ಮಾಲೀಕರೇ ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಯಾವುದೇ ರೀತಿಯ ಗೊಂದಲವಿಲ್ಲದೆ ಜಿಲ್ಲೆಯಲ್ಲಿ ತಾಲೂಕು ಪಂಚಾಯಿತಿಗೆ ಇಷ್ಟೊಂದು ಆದಾಯ ಬರಲು ಕಾರಣ ತಾಲೂಕು ಪಂಚಾಯಿತಿ ಕಾರ್ಯ ನಿರ್ವಾಹಕಾಧಿಕಾರಿ ಸತೀಶ್ ಅವರ ಪರಿಶ್ರಮ ಎಂದು ಸಾರ್ವಜನಿಕ ವಲಯದಲ್ಲಿ ಭರಿ ಚರ್ಚೆಯಾಗುತ್ತಿದೆ. ಜೊತೆಗೆ ಸಾರ್ವಜನಿಕರು ತಾಲೂಕು ಪಂಚಾಯಿತಿ ಅಧಿಕಾರಿಯ ಕೆಲಸದ ಬಗ್ಗೆ ಮೆಚ್ಚುಗೆ ವ್ಯಕ್ತವಾಗಿದೆ.

> ಬೇಲೂರು ಪುರಸಭೆಯಲ್ಲಿ 132 ಮಳಿಗೆಗಳು ಇದ್ದರೂ ಕೂಡ ಕೇವಲ 16 ಮಳಿಗೆಗಳಿಗೆ ಬಂದಿರುವ ತಾಲೂಕು ಪಂಚಾಯಿತಿ ಆದಾಯವನ್ನು ಪುರಸಭೆಗೆ ಏಕೆ ಬರುತ್ತಿಲ್ಲ ಎಂಬ ಅನುಮಾನ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗುತ್ತಿದೆ.

ಇನ್ನೂ ಹರಾಜಾಗದೇ ಉಳಿದಿರುವ 4 ಮಳಿಗೆಗಳನ್ನು ಶೀಘ್ರದಲ್ಲೇ ಮರು-ಹರಾಜು ಮಾಡಲಾಗುವುದು. ಮುಂದಿನ ದಿನಗಳಲ್ಲಿ ತಾಲೂಕು ಪಂಚಾಯತಿಯ ಒಟ್ಟು ಆದಾಯವನ್ನು 1 ಕೋಟಿ ರೂ.ಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ.

ಈ ಹರಾಜು ಪ್ರಕ್ರಿಯೆಯ ಬಳಿಕ ಬೇಲೂರು ತಾಲೂಕು ಪಂಚಾಯತಿ ಇಡೀ ಜಿಲ್ಲೆಯಲ್ಲೇ ಅತಿ ಹೆಚ್ಚು ಆದಾಯ ಹೊಂದಿರುವ ಪಂಚಾಯತಿಯಾಗಿ ಹೊರಹೊಮ್ಮಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಹರಾಜಿನಲ್ಲಿ ಮಳಿಗೆ ಪಡೆದ ಬಾಡಿಗೆದಾರರಿಗೆ ಮುಂದಿನ ಪ್ರಕ್ರಿಯೆ ಪೂರ್ಣಗೊಳಿಸಲು 7 ದಿನಗಳ ಕಾಲಾವಕಾಶ ನೀಡಲಾಗಿದೆ. ಮೇ 15 ರೊಳಗೆ ನಿಗದಿತ ಠೇವಣಿ ಪಾವತಿಸಿ ಒಪ್ಪಂದ ಮಾಡಿಕೊಳ್ಳಬೇಕು.

ನಿಗದಿತ ಅವಧಿಯೊಳಗೆ ಬಾರದಿದ್ದರೆ, ಆ ಮಳಿಗೆಗಳನ್ನು ಮತ್ತೆ ಮರು-ಹರಾಜು ಮಾಡಲಾಗುವುದು ಎಂದು ಎಚ್ಚರಿಸಿದರು.

ಈ ಸಂಪೂರ್ಣ ಹರಾಜು ಪ್ರಕ್ರಿಯೆ ಯಶಸ್ವಿಯಾಗಿ ನಡೆಯಲು ಕ್ಷೇತ್ರದ ಶಾಸಕ ಹೆಚ್.ಕೆ.ಸುರೇಶ್ ಅವರ ಬೆಂಬಲ, ಮಾರ್ಗದರ್ಶನ ಹಾಗೂ ಸೂಚನೆಗಳು ಪ್ರಮುಖ ಕಾರಣವಾಗಿವೆ ಎಂದು ಅವರು ಇದೇ ಸಂದರ್ಭದಲ್ಲಿ ಹೇಳಿದರು.

# ಕನ್ನಡ ಸಾಹಿತ್ಯ ನಿತ್ಯ ನಿರಂತರ ಬೆಳೆಯುತಿರಲಿ

• ಪ್ರಜೋದಯ ವರದಿ

**ಹಾಸನ:** ಕನ್ನಡ ಸಾಹಿತ್ಯ ಬಹಳ ವಿಶಿಷ್ಟವಾಗಿದ್ದು ಅದು ನಿತ್ಯ ನಿರಂತರ ಬೆಳೆಯುತ್ತಿರಲಿ. ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಪೂರಕವಾಗಿ ಸಾಹಿತಿಗಳು ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದು ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಉದಯರವಿ ಹೇಳಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಕದಂಬ ಸೈನ್ಯ ಕನ್ನಡ ಸಂಘಟನೆ, ಹಾಸನ ಜಿಲ್ಲಾ ಘಟಕದಿಂದ ಸಾಹಿತಿ ಗೊರೂರು ಅನಂತರಾಜು ಅವರ ಇತ್ತೀಚಿನ ಸಾಹಿತ್ಯ ಕೃತಿಗಳ ವಿಮರ್ಶಾ ಗ್ರಂಥ 'ಸಾಗುತಾ ಇದೆ ದೋಣಿ ನದಿಯ ನೀರನು ಸೀಳುತಾ' ಕೃತಿಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಪುಸ್ತಕ ಬಿಡುಗಡೆ ಕಾರ್ಯಕ್ರಮಗಳನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಾಹಿತಿಗಳನ್ನು



ಗುರುತಿಸುವ ಮೂಲಕ ಮಾಡಬೇಕು. ಆ ಮೂಲಕ ಸಾಹಿತ್ಯ ವಲಯದ ಉಳಿವಿಗೆ ಕಾರ್ಯ ಪ್ರವೃತ್ತವಾಗಬೇಕು ಎಂದು ಹೇಳಿದರು.

ಸುರ್ವೆ ಪತ್ರಿಕೆ ಸಂಪಾದಕ ರಮೇಶ್ ಸುರ್ವೆ ಅವರ ಸಾಹಿತ್ಯ ಸಾಂಸ್ಕೃತಿಕ ಸೇವೆಯನ್ನು ಸ್ಮರಿಸಿ ಸನ್ಮಾನಿಸಲಾಯಿತು. ಸನ್ಮಾನಿತರಾದ ರಮೇಶ್ ಸುರ್ವೆರವರು ಮಾತನಾಡಿ ಹಾಸನ ಜಿಲ್ಲೆ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಕೊಡುಗೆಯನ್ನು ನೀಡಿದೆ ಎಂಬುದನ್ನು ಸ್ಮರಿಸಿದರು.

ಸಾಹಿತಿ ಗೊರೂರು ಅನಂತರಾಜು ಮಾತನಾಡಿ, ಲೋಕಾರ್ಪಣೆಗೊಂಡ ಕೃತಿಗೆ ರಮೇಶ್ ಸುರ್ವೆ ಅವರು ಬೆನ್ನುಡಿ ಬರೆದಿದ್ದು, ಉದಯರವಿ ಅವರಿಂದ ಲೋಕಾರ್ಪಣೆಗೊಂಡಿರುವುದು ಸಂತಸ ತಂದಿದೆ ಎಂದರು.

ಕದಂಬ ಸೈನ್ಯ ಹಾಸನ ಜಿಲ್ಲಾ ಅಧ್ಯಕ್ಷರು ಹಾಗೂ ನಿವೃತ್ತ ಪ್ರಾಂಶುಪಾಲ ಎ.ಹೆಚ್.ಗಣೇಶ್ ಅಂಕಪುರ ಅವರು ಮಾತನಾಡಿ, ಸಾಹಿತ್ಯ ವಲಯದ ಬೆಳವಣಿಗೆಗೆ ಪೂರಕವಾಗಿ ಅಳಿಲು ಸೇವೆ ಮಾಡಲು ಸದಾ ಸಿದ್ಧರಿರಬೇಕು ಎಂದರು.

ಸಿರಿಗನ್ನಡ ವೇದಿಕೆ ಹಾಸನ ಜಿಲ್ಲಾಧ್ಯಕ್ಷ ಆನಂದ ಪಟೇಲ್ ನೆಲ್ಲಿಗೆರೆ ಮಾತನಾಡಿ, ಪುಸ್ತಕಗಳನ್ನು ತೆರೆಯುವ ಮೂಲಕ ಸಾಹಿ ಭಂಡಾರ ತೆರೆದುಕೊಳ್ಳುತ್ತದೆ ಮತ್ತು ಆ ಮೂಲಕ ಜ್ಞಾನ ಭಂಡಾರದ ಅರಿವು ನಮಗಾಗುತ್ತದೆ ಎಂದು ಹೇಳಿದರು.

ಹಾಸನ ತಾಲ್ಲೂಕು ಅಧ್ಯಕ್ಷ ಕುಮಾರ್, ಸಕಲೇಶಪುರ ತಾಲ್ಲೂಕು ಅಧ್ಯಕ್ಷ ಹಾಗೂ ಲೇಖಕ ವಿಶ್ವಾಸ್ ಡಿ.ಗೌಡ, ಶಿಕ್ಷಕ ಚಿದಾನಂದ, ಲೇಖಕಿ ಶ್ರೀವಿಜಯ ಹಾಸನ್, ಹೆಚ್.ಜಿ.ಗಂಗಾಧರ್, ಯಾಕೂಬ್, ಗಾಯಕ ಜೆ. ಆರ್.ಶ್ರೀಕಾಂತ್ ಉಪಸ್ಥಿತರಿದ್ದರು.


# ಬೇಲೂರು ಪುರಸಭೆ ಅಧ್ಯಕ್ಷರಾಗಿ ಅಕ್ರಂ ಶರೀಫ್

• ಪ್ರಜೋದಯ ವರದಿ

**ಬೇಲೂರು:** ಪುರಸಭೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸ್ಪಷ್ಟ ಬಹುಮತವಿದ್ದರೂ ಪಕ್ಷದಲ್ಲಿನ ಒಳಪಂಗಡಗಳ ಪರಿಣಾಮ ಜೆಡಿಎಸ್ -ಬಿಜೆಪಿ ಪಕ್ಷದ ಸದಸ್ಯರ ಬೆಂಬಲದೊಂದಿಗೆ 23 ನೇ ವಾರ್ಡಿನ ಸದಸ್ಯ ಅಕ್ರಂ ಶರೀಫ್ ಅಧ್ಯಕ್ಷರಾಗಿ ಆಯ್ಕೆಯಾದರು.

ಪುರಸಭಾ ಸದಸ್ಯ ಅಕ್ರಂ ಶರೀಫ್ ಅವರು ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ತಹಶೀಲ್ದಾರ್ ಶ್ರೀಧರ ಕಂಕಣವಾಡಿ ಅವಿರೋಧವಾಗಿ ಅಧ್ಯಕ್ಷರೆಂದು ಘೋಷಿಸಿದರು.

ಸೋಮವಾರ ಪುರಸಭೆಯ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿದ್ದು, 23 ಸದಸ್ಯರಲ್ಲಿ 17 ಜನ ಕಾಂಗ್ರೆಸ್ ಸದಸ್ಯರು, 5 ಜನ ಜೆಡಿಎಸ್, ಒಬ್ಬ ಬಿಜೆಪಿ ಸದಸ್ಯರ ಪೈಕಿ ಎ.ಆರ್. ಅಶೋಕ್ ರಾಜೀನಾಮೆ



ನೀಡದೆ ಕೋರ್ಟ್ ಮೊರೆ ಹೋದಾಗ ಒಂದು ವರ್ಷದ ತನಕ 15 ನೇ ವಾರ್ಡಿನ ಉಷಾ ಸತೀಶ್ ಪ್ರಭಾರ ಅಧ್ಯಕ್ಷರಾಗಿ 11 ತಿಂಗಳುಗಳ ಕಾಲ ಮುಂದುವರೆದಿದ್ದರು.

ಅಶೋಕ್ ಕೋರ್ಟ್ ಕೇಸನ್ನು ವಾಪಸ್ಸು ಪಡೆದ ಹಿನ್ನಲೆಯಲ್ಲಿ ಚುನಾವಣೆ ಘೋಷಣೆ ಮಾಡಲಾಯಿತು, ಬಹುತೇಕ ಅಕ್ರಂ ಶರೀಫ್ ಆಯ್ಕೆಯಾವುದು ಖಚಿತ ಹಿನ್ನಲ್ಲೇ ಕಾಂಗ್ರೆಸ್ ಪಕ್ಷದ ಕೆಲ ಸದಸ್ಯರು ಮುನಿಸಿಕೊಂಡಿದ್ದರ ಪರಿಣಾಮ ಬಹುಮತಕ್ಕೆ 13 ಸದಸ್ಯರ ಅವಶ್ಯಕತೆಗೆ ಜೆಡಿಎಸ್ ಹಾಗೂ ಬಿಜೆಪಿ ಪಕ್ಷದ ಸದಸ್ಯರ ವಿಶ್ವಾಸ ಪಡೆದುಕೊಂಡು ಅಧ್ಯಕ್ಷರಾಗಿ ಆಯ್ಕೆಯಾದರು.

ಆಯ್ಕೆಯಾದ ಬಳಿಕ ಮಾತನಾಡಿದ ಅಕ್ರಂ ಶರೀಫ್, ಪುರಸಭಾ ಅಧ್ಯಕ್ಷನಾಗಲು ಹಿರಿಯರಾದ ಬಿ. ಶಿವರಾಮ್, ಎಂ.ಜಿ. ನಿಶಾಂತ್, ಎಂ. ಆರ್ ವೆಂಕಟೇಶ್, ಇಕ್ಬಾಲ್ ಅಹಮದ್ ಸೇರಿದಂತೆ ಜೆಡಿಎಸ್ ಮತ್ತು ಬಿಜೆಪಿ ಸದಸ್ಯರು ನನಗೆ ಧೈರ್ಯ ತುಂಬಿದರು. ಇಷ್ಟು ದಿನ ನನ್ನ ಜೊತೆಗಿದ್ದ ಜೆಡಿಎಸ್ ಸದಸ್ಯ ಶೈಲೇಶ್, ಜಗದೀಶ್, ಪ್ರಭಾಕರ್, ವೆಂಕಟೇಶ್, ಪುಟ್ಟಸ್ವಾಮಿ, ಜಮೀಲಾ, ಅಶೋಕ್, ಉಷಾ, ರತ್ನ ಸತ್ಯನಾರಾಯಣ, ಸೌಮ್ಯ ಸುಬ್ರಮಣ್ಯ ದಿವ್ಯ ಗಿರೀಶ್ ಸೇರಿದಂತೆ ಎಲ್ಲಾ ಸದಸ್ಯರ ಬಹುಮತದ ಬೆಂಬಲ ನೀಡಿ ಇಂದು ನನ್ನನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ ಎಂದು ಹೇಳಿದರು.

ಇದೇ ವೇಳೆ ಕಾಂಗ್ರೆಸ್ ಪಕ್ಷದ 11 ಸದಸ್ಯರು ಮತ್ತು ಜೆಡಿಎಸ್ ಹಾಗೂ ಬಿಜೆಪಿ ಸದಸ್ಯರೂ ಸಹ ಬೆಂಬಲ ಸೂಚಿಸಿದ್ದಾಗಿ ಹೇಳಿದರು.

ಪುರಸಭಾ ಮಾಜಿ ಅಧ್ಯಕ್ಷ ಎ. ಆರ್.ಅಶೋಕ್, ಸದಸ್ಯರಾದ ಬಿ.ಸಿ. ಜಗದೀಶ್ ತೀರ್ಥಕುಮಾರಿ ಎಂ.ಆರ್., ವೆಂಕಟೇಶ್, ಉಷಾ ಇತರರಿದ್ದರು.

### ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಕ್ಕೆ ಅರ್ಜಿ ಅಹ್ವಾನ

ಹಾಸನ ಮೇ.11(ಕರ್ನಾಟಕ ವಾರ್ತೆ): ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ 2024-25ನೇ ಸಾಲಿನ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆ ಅಡಿಯಲ್ಲಿ ಪ್ರವಾಸೋದ್ಯಮ/ಅತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲು ಅಭ್ಯರ್ಥಿಗಳಿಂದ ಮೊತ್ತೊಮ್ಮೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಪ್ರವಾಸೋದ್ಯಮ ಇಲಾಖೆಯ ವತಿಯಿಂದ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಅತಿಥ್ಯ ಕ್ಷೇತ್ರದ ಸಂಸ್ಥೆಗಳಾದ ಈಜ ಅಡಿಚಿಜಿಣ ಟಿಣಣಣ (ಈಅ), ಒಥಿಡಿ ಟಿಣಣಣ ಜಿ ಊಣಟ ಒಚಿಟಿಚಿಟಿಣ (ಊಒ) ರವರ ಮೂಲಕ ವಸತಿ ಸಹಿತ ಕಾರ್ಯಕ್ರಮವನ್ನು ಜಾರಿಗೊಳಿಸಲು ಉದ್ದೇಶಿಸಲಾಗಿದೆ.

ಕಾರ್ಯಕ್ರಮದ ವಿವರ: ಈಜಃಡಿಚಿ ಡಿಥಿ ಣತಿಚಿಡಿಜ, ಒಟಣ ಅಟಿ ಅಇ, ಖ ಂಣಣಟಿಜಚಿಟಿಣ, ಈಡಿಟಣ ಔಜಿಜಿಥಿ ಂಥಿಚಿಣ ತರಬೇತಿಗಳನ್ನು ಪಡೆಯಲು ಮೇ.22 ರವರೆಗೆ ಉಪ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆಯ ಕಚೇರಿಯಲ್ಲಿ ಅರ್ಜಿಗಳನ್ನು ಉಚಿತವಾಗಿ ವಿತರಿಸಲಾಗುವುದು.

ಸದರಿ ತರಬೇತಿ ಪಡೆಯಲು ಆಸಕ್ತಿ ಇರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಅರ್ಜಿಗಳನ್ನು ಮೇ.22 ರಂದು ಸಂಜೆ 5.30 ರೊಳಗೆ ಉಪ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ರವರ ಕಚೇರಿಗೆ ಸಲ್ಲಿಸಬಹುದಾಗಿದೆ, ಈ ತರಬೇತಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಯಾವುದೇ ವಿಚಾರಣೆ/ ಸ್ಪಷ್ಟಿಕರಣ ಕುರಿತು ಉಪ ನಿರ್ದೇಶಕರನ್ನು ಕಚೇರಿ ಹಾಗೂ ದೂರವಾಣಿ ಸಂಖ್ಯೆ 08172-268862 ಗೆ ಸಂಪರ್ಕಿಸಬಹುದಾಗಿದೆ

# ಸವಾಲುಗಳನ್ನು ಎದುರಿಸಿ ವಿದ್ಯಾರ್ಥಿಗಳು ಸಾಧನೆ ಮಾಡಬೇಕು

• ಪ್ರಜೋದಯ ವರದಿ

**ಮೊಸಳೆಹೊಸಳ್ಳಿ:** ಇಲ್ಲಿನ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ 'ಮಕರೋತ್ಸವ 2026' ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಯಿತು.

ವಿದ್ಯಾರ್ಥಿಗಳ ಕನಸುಗಳಿಗೆ ದಿಕ್ಕು ನೀಡುತ್ತಾ, ಭವಿಷ್ಯವನ್ನು ರೂಪಿಸುವ ಸಾಧನಾ ಕೇಂದ್ರವಾಗಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಮೊಸಳೆ ಹೊಸಹಳ್ಳಿ ಕಾಲೇಜು ನಿರಂತರವಾಗಿ ಮುಂದುವರಿಯುತ್ತಿದೆ ಶೈಕ್ಷಣಿಕ ವರ್ಷವಾದ 2025-26ನೇ ವರ್ಷದ ಮಕರೋತ್ಸವದಲ್ಲಿ ಕಾಲೇಜಿನಲ್ಲಿ ಆಯೋಜಿಸಿದ್ದ ಹತ್ತು ಹಲವು ಸಾಂಸ್ಕೃತಿಕ ಹಾಗೂ ಕ್ರೀಡಾ ವಿಭಾಗದ ಸ್ಪರ್ಧೆಗಳಲ್ಲಿ ಸ್ಪರ್ಧಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನವನ್ನು




ವಿತರಿಸಲಾಯಿತು.

ಸರ್ಕಾರಿ ಕಲಾ, ವಾಣಿಜ್ಯ ಮತ್ತು ಪಿ.ಜಿ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಾ. ಇರ್ಷಾದ್ ಅವರು ಮಾತನಾಡಿ, ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನವನ್ನು ಹೇಗೆ ಸದುಪಯೋಗಪಡಿಸಿಕೊಳ್ಳಬೇಕು, ತಮ್ಮ ಗುರಿಯನ್ನು ಹೇಗೆ ತಲುಪಬೇಕು, ಬರುವ ಸವಾಲುಗಳನ್ನು ಹೇಗೆ ಎದುರಿಸಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಿವೃತ್ತ ಪ್ರಾಂಶುಪಾಲ ಡಾ. ವೆಂಕಟೇಶ್ ಮಾತನಾಡಿ, ವಿದ್ಯಾರ್ಥಿಗಳು ಶಿಸ್ತಿನ ಸಿಪಾಯಿಗಳಾಗಬೇಕು, ಒಳ್ಳೆಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಅದು ಅವರನ್ನು ತಲುಪಬೇಕಾದಲ್ಲಿಗೆ ತಲುಪಿಸುತ್ತದೆ ಎಂದರು.

ಡಾ. ಪ್ರಶಾಂತ್ ಮಾತನಾಡಿ, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ಜೀವನದಲ್ಲಿ ಶಿಸ್ತು ಮತ್ತು ಸಂಯಮ ಎಷ್ಟು ಮುಖ್ಯ ಎಂಬುದನ್ನು ತಿಳಿಸಿದಲ್ಲದೆ, ಈ ಕ್ಷಣ ಬಹಳ ಅಮೂಲ್ಯವಾದುದು, ಅದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಹೇಳಿದರು.

ಸಂಸ್ಥೆಯ ಪ್ರಾಂಶುಪಾಲ ಡಾ.ಟಿ. ರಂಗಸ್ವಾಮಿ ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸಂಸ್ಥೆ ನಡೆದು ಬಂದ ಹಾದಿಯನ್ನು ಸ್ಮರಿಸಿ ವಿದ್ಯಾರ್ಥಿಗಳು ತಮ್ಮ ಕೌಶಲ್ಯ ಹಾಗೂ ತಮ್ಮ ಪ್ರತಿಭೆಗಳನ್ನು ಅನಾವರಣ ಮಾಡಿಕೊಂಡು ಜೀವನದಲ್ಲಿ ಉತ್ತಮ ಸ್ಥಾನಕ್ಕೆ ಏರಬೇಕೆಂದು ಹೇಳಿ ವಿದ್ಯಾರ್ಥಿಗಳು ಕೇವಲ ಶೈಕ್ಷಣಿಕವಾಗಿ ಅಲ್ಲದೆ ಎಲ್ಲಾ ಕ್ಷೇತ್ರಗಳಲ್ಲೂ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು, ತಮ್ಮ ಕೌಶಲ್ಯತೆಯನ್ನು ಹೆಚ್ಚಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಾರ್ಷಿಕ ವರದಿಯನ್ನು ಸಿವಿಲ್ ವಿಭಾಗದ ಡಾ.ಪ್ರವೀಣ್ ಅವರು ಪ್ರಸ್ತುತಪಡಿಸಿದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು. ಎಲ್ಲಾ ವಿಭಾಗದ ಮುಖ್ಯಸ್ಥರು ಇದ್ದರು.

## ರಾಗಿ ಖರೀದಿಸಲು ಮೇ15ರ ವರೆಗೆ ಅವಧಿ ಕಡಿತ

ಹಾಸನ: ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿಯಲ್ಲಿ 2025-26ನೇ ಸಾಲಿನ ರಾಗಿ ಖರೀದಿ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರವು ಮೇ.30 ರವರೆಗೆ ರೈತರಿಂದ ಎಂ.ಎಸ್.ಪಿ ರಾಗಿಯನ್ನು ಖರೀದಿ ಮಾಡಲು ಅವಧಿಯನ್ನು ನೀಡಲಾಗಿದ್ದು, ಮೇ ಮತ್ತು ಜೂನ್ -2026ರ ಮಾಹೆಗೆ ಪ್ರತಿ ಮಾಹೆಗೆ ಎನ್.ಎಫ್.ಎಸ್.ಎ ಅಡಿಯಲ್ಲಿ 3+3 ಒಟ್ಟು 6 ಕೆ.ಜಿ ರಾಗಿಯನ್ನು ವಿತರಣೆ ಮಾಡಲು ಹಂಚಿಕೆ ನೀಡಲಾಗಿರುತ್ತದೆ, ರೈತರಿಂದ ಖರೀದಿ ಕಾರ್ಯ ಮಂದ ಗತಿಯಲ್ಲಿ ಸಾಗುತ್ತಿರುವುದ್ದರಿಂದ ಮೇ 30 ಮೊಟಕುಗೊಳಿಸುವ ರಾಗಿ ಖರೀದಿಯ ಅಂತಿಮ ದಿನಾಂಕವನ್ನು ಮೇ 15 ಕ್ಕೆ ನಿಗದಿಪಡಿಸಲಾಗಿದೆ, ರಾಗಿ ದಾಸ್ತಾ ನನ್ನು ಮೇ 15 ರೊಳಗೆ ಖರೀದಿ ಕೇಂದ್ರಗಳಿಗೆ ನೀಡಲು ತಿಳಿಸಲಾಗಿದೆ.

**ಮಲೆನಾಡು ಕಾಲೇಜಿನಲ್ಲಿ ಸಂಭ್ರಮದ ಮಲ್ನಾಡ್ ಫೆಸ್ಟ್ | ಸಾಂಸ್ಕೃತಿಕ - ಕ್ರೀಡಾ ಚಟುವಟಿಕೆಗಳು**

# ಸಾಂಸ್ಕೃತಿಕ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ಸ್ಫೂರ್ತಿ

• ಪ್ರಜೋದಯ ವರದಿ

**ಹಾಸನ: ನಗರದ** ಮಲೆನಾಡು ಕಾಲೇಜಿನ ಮಲ್ನಾಡ್ ಫೆಸ್ಟ್ ಮೂರು ದಿನಗಳ ಕಾಲ ನಡೆದು ಕಾಲೇಜಿನ ಎಲ್ಲಾ ವಿಭಾಗಳ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿ ಯಶಸ್ವಿಗೊಳಿಸಿದರು ಮತ್ತು ಹಲವಾರು ಸಾಂಸ್ಕೃತಿಕ ಮತ್ತು ವಿವಿಧ ಕ್ರೀಡಾ ಚಟುವಟಿಕೆಗಳ ಕಾರ್ಯಕ್ರಮಗಳನ್ನು ನಡೆಸಲಾಯಿತು. ಅತ್ಯುತ್ತಮವಾಗಿ ಪ್ರದರ್ಶನವನ್ನು ನೀಡಿದ ಎ.ಐ.ಎಂ.ಎಲ್. ಹಾಗೂ ಸಿ.ಎಸ್.ಬಿ.ಎಸ್. ಬ್ರಾಂಚಿನವರು ಪ್ರಥಮ ಬಹುಮಾನವನ್ನು ಪಡೆದು ಸಂತಸ ಹಂಚಿಕೊಂಡರು.

ಎರಡನೇ ಬಹುಮಾನವನ್ನು ಕಂಪ್ಯೂಟರ್ ಸೈನ್ಸ್ ವಿಭಾಗವು ಪಡೆದುಕೊಂಡರೆ, 3 ನೇ ಬಹುಮಾನವನ್ನು ಎಲೆಕ್ಟ್ರಾನಿಕ್ಸ್ ಕಮ್ಯುನಿಕೇಷನ್ ವಿಭಾಗದ ವಿದ್ಯಾರ್ಥಿಗಳು ಪಡೆದರು. ಟ್ರೋಫಿ ಪಡೆದ ವಿದ್ಯಾರ್ಥಿಗಳು ಸಂಭ್ರಮಾಚರಣೆ ಮಾಡಿದರು.

ಕಳೆದ ಮೂರು ದಿನದಿಂದ ವಿವಿಧ ಸಾಂಸ್ಕೃತಿಕ ಎಲ್ಲಾ ತರಹದ ವಿವಿಧ ಕಲಾ ಪ್ರತಿಭೆಯನ್ನು ವ್ಯಕ್ತಪಡಿಸಿದರು ಹಾಗೂ ಇಡೀ ಕಾಲೇಜಿನ ಆವರಣವನ್ನು ತೋರಣಗಳಿಂದ ವಿವಿಧ ಕಲಾಕೃತಿಗಳಿಂದ ಅಲಂಕಾರಗೊಳಿಸಿದ್ದರು. ವಿದ್ಯಾರ್ಥಿಗಳ ಈ ವಾರ್ಷಿಕೋತ್ಸವ ಸಮಾರಂಭವು ಬಹಳ ಯಶಸ್ವಿಯಾಗಿ ನಡೆಯಿತು. ಕಾಲೇಜಿನ ಸುಮಾರು ನಾಲ್ಕು ಸಾವಿರ ವಿದ್ಯಾರ್ಥಿಗಳು ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು. ಎಲ್ಲಾ ವಿಭಾಗದ ವಿದ್ಯಾರ್ಥಿಗಳು ಆಯಾಯ ಬ್ರಾಂಚಿನ ವತಿಯಿಂದ ಡ್ಯಾನ್ಸ್ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಟ್ಟರು ವಿವಿಧ ಕಲಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು.

ಸ್ಪರ್ಧೆಯಲ್ಲಿ ಗೆದ್ದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ ಮಾತನಾಡಿದ ಮಲೆನಾಡು ಇಂಜಿನಿಯರಿಂಗ್ ಕಾಲೇಜು ಪ್ರಾಂಶುಪಾಲ ಡಾ.ಹೆಚ್. ಜೆ.ಅಮರೆಂದ್ರ ಅವರು, ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು



ವಿದ್ಯಾರ್ಥಿಗಳಿಗೆ ಸ್ಫೂರ್ತಿ ನೀಡುತ್ತವೆ. ವರ್ಷದ ಕೊನೆಯಲ್ಲಿ ವಾರ್ಷಿಕೋತ್ಸವ ಆಚರಣೆ ಮಾಡುವ ಮೂಲಕ ತಮ್ಮ ಕಲಾ ಪ್ರತಿಭೆಯನ್ನು ತೋರಿಸಿರುವುದು ಮೆಚ್ಚುಗೆ ಆಗಿದೆ ಎಂದರು.

ತಮ್ಮ ವ್ಯಾಸಂಗದ ಜೊತೆಯಲ್ಲಿ ಸಾಂಸ್ಕೃತಿಕ ಕ್ರೀಡಾ ಚಟುವಟಿಕೆಗಳು ಹಾಗೂ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ತೋರಿಸಿದ್ದಾರೆ, ಇವರೆಲ್ಲರಿಗೂ ಕಾಲೇಜಿನ ಆಡಳಿತ ಮಂಡಳಿಯ ಪರವಾಗಿ ಹಾಗೂ ಕಾಲೇಜ್ ವತಿಯಿಂದ ಇವರಿಗೆ ಶುಭಾಶಯಗಳನ್ನು ತಿಳಿಸುತ್ತೇನೆ ಎಂದು ಹೇಳಿದರು.

ಪ್ರತಿ ವರ್ಷವೂ ಹಾಸನದ ಮಲೆನಾಡು ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೂರು ದಿನಗಳ ಕಾಲ ವಿವಿಧಸಾಂಸ್ಕೃತಿಕಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುತ್ತವೆ ಈ ಕಾರ್ಯಕ್ರಮ ಯಶಸ್ವಿಗೊಳಿಸುವಲ್ಲಿ ಹಿರಿಯ ವಿದ್ಯಾರ್ಥಿಗಳು ಕಾಲೇಜಿನ ಎಲ್ಲಾ ಕ್ಲಬ್ ವಿದ್ಯಾರ್ಥಿಗಳು ವಿದ್ಯಾರ್ಥಿ ಸಂಘದ ಪದಾಧಿಕಾರಿಗಳು ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ಕೊಡುತ್ತಿರುವುದು ನಮ್ಮೆಲ್ಲರಿಗೂ ಗೌರವ ತಂದಿದೆ ಎಂದರಲ್ಲದೆ, ಸುಮಾರು ನಾಲ್ಕು ಸಾವಿರ ವಿದ್ಯಾರ್ಥಿಗಳು 500 ಜನ ನೌಕರಭಾಂಧವರು ನಮ್ಮ ಕಾಲೇಜಿನಲ್ಲಿ ಇದ್ದು ಇವರೆಲ್ಲರೂ ಈ ಮೂರು ದಿನಗಳ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ವಿಶೇಷವಾದ ಹಬ್ಬದ ಆಚರಣೆಯಂತೆ ನಡೆಸುತ್ತಾರೆ ಇದೆಲ್ಲವೂ ನಮಗೆ ಗೌರವ ಮತ್ತು ಕೀರ್ತಿ ತಂದಿದೆ ಎಂದು ತಿಳೀಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ.ಇಂದಿರಾ ಬಹುದೂರ್, ಸಹ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ. ಶಿವಶಂಕರ್, ಕಾರ್ಯಕ್ರಮದ ಸಂಯೋಜಕರಾದ ಹಾಗೂ ಪ್ರಾಧ್ಯಾಪಕರಾದ ಡಾ.ಮಾರ್ಗರೇಟ್, ಡಾ ಜೀವನ್, ಡಾ ಶರತ್, ಡಾ. ಸುಮನಾ ಜಯಪ್ರಕಾಶ್, ಡಾ.ಹರೀಶ್, ಪ್ರೊ. ಬಿ.ಬಿ.ನಿಲಕಂಠಪ್ಪ, ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಮಾಧ್ಯಮ ಸಂಯೋಜಕರಾದ ಕಟ್ಟಾಯ ಶಿವಕುಮಾರ್, ಮದಕರಿನಾಯಕ್, ಕಿರಣ್ ಇತರರು ಭಾಗವಹಿಸಿದ್ದರು.


ಕರ್ನಾಟಕ ಸರ್ಕಾರ ಧಾರ್ಮಿಕ ದತ್ತಿ ಇಲಾಖೆ

ಶ್ರೀ ಚನ್ನಕೇಶವ ಸ್ವಾಮಿ ದೇವಸ್ಥಾನ, ಬೇಲೂರು.

ಕಾರ್ಯ ನಿರ್ವಾಹಕ ಅಧಿಕಾರಿಯವರ ಕಾರ್ಯಾಲಯ

ಕ್ರ.ಸಂ.ಸಿ.ಕೆ.ಎಸ್.ಟಿ.ಸಿ.ಆರ್/88/2018-19 ದೂರವಾಣಿ ಸಂಖ್ಯೆ: 08177, 222218

ದಿನಾಂಕ: 10/05/2026

**ಇ- ಹರಾಜು ಪ್ರಕಟಣೆ**

ಬೇಲೂರು ಶ್ರೀ ಚನ್ನಕೇಶವ ಸ್ವಾಮಿ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ವಿವಿಧ ಬಾಬ್ತುಗಳಿಗೆ ಇ- ಹರಾಜು ಕರೆಯಲಾಗಿದೆ. (www.kppp.karnataka.gov.in) ವಹಿವಾಟುಗಳು ಚಾಲ್ತಿಗೆ ಬರುವ ದಿನಾಂಕ ಹಾಗೂ ಇ.ಎಂ.ಡಿ. ಹಣ ಕಟ್ಟಲು ಕೊನೆಯ ಮತ್ತು ಬಿಡ್ ಮಾಡುವ ದಿನಾಂಕಗಳ ವಿವರ ಈ ಕೆಳಕಂಡಂತಿರುತ್ತದೆ.

ಇ- ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಇ-ಹರಾಜು ಕೊನೆಗೊಳ್ಳುವ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ.

| ಕ್ರ.ಸಂ. | ಹರಾಜಿನ ಹೆಸರು | ಆರಂಭ ದಿನಾಂಕ | ಇ.ಎಂ.ಸಿ. ಮೊತ್ತ | ಇ-ಹರಾಜು ದಿನಾಂಕ ಮತ್ತು ಸಮಯ |
|---|---|---|---|---|
| 1. | ಶ್ರೀ ಚನ್ನಕೇಶವ ಸ್ವಾಮಿ ದೇವಸ್ಥಾನದ ಪಾದರಕ್ಷೆ ಉಸ್ತುವಾರಿ ನಿರ್ವಹಣೆ ಅವಧಿ (ದಿ: 01/06/2026 ರಿಂದ ದಿ: 31/05/2027) | 06/05/2026 ಇ.ಎಂ.ಡಿ. ಕಟ್ಟಲು ಕೊನೆಯ ದಿನಾಂಕ: 15/05/2026 | 3,00,000=00 | 16/05/2026 ರ ಬೆಳಿಗ್ಗೆ 10.30 ರಿಂದ ಸಂಜೆ 5.00 ಗಂಟೆಗೆ |
| 2. | ದೇವಾಲಯದ ಮುಂಭಾಗ ದಾಸೋಹ ಭವನದ ಹತ್ತಿರ ಇರುವ ಅಲ್ಯೂಮಿನಿಯಂ ಶೀಟ್ ಡೈರಿ ಮಳಿಗೆ ಅವಧಿ (ದಿ: 01/06/2026 ರಿಂದ ದಿ: 31/05/2029 ರ ವರೆಗೆ (03) ವರ್ಷ | 06/06/2026 ಇ.ಎಂ.ಡಿ. ಕಟ್ಟಲು ಕೊನೆಯ ದಿನಾಂಕ: 15/05/2026 | 1,00,00000 | 16/05/2026 ರ ಬೆಳಿಗ್ಗೆ 10.30 ರಿಂದ ಸಂಜೆ 4.30 ಗಂಟೆಗೆ |

ವಿ.ಸೂ:- ಆಸಕ್ತರು ಹರಾಜಿಗೆ ಸಂಬಂಧಿಸಿದಂತೆ ಇರುವ ಷರತ್ತುಗಳ ಬಗ್ಗೆ ಮತ್ತು ಹೆಚ್ಚಿನ ಮಾಹಿತಿಯನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ. ಇ-ಹರಾಜನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕು ಆಡಳಿತಾಧಿಕಾರಿಗಳು ಹಾಗೂ ಕಾರ್ಯ ನಿರ್ವಾಹಕ ಅಧಿಕಾರಿಯವರದ್ದಾಗಿರುತ್ತದೆ.

- ಸಹಿ -

ಕಾರ್ಯ ನಿರ್ವಾಹಕ ಅಧಿಕಾರಿಗಳು

ಶ್ರೀ ಚನ್ನಕೇಶವ ಸ್ವಾಮಿ ದೇವಸ್ಥಾನ, ಬೇಲೂರು.

# ತಂಬಾಕು ಮಾರುಕಟ್ಟೆಯಲ್ಲಿ ಬೆಲೆ ಕುಸಿತದ ಬಿಸಿ

## ದಾಸ್ತಾನಿಟ್ಟ ಹೊಗೆಸೊಪ್ಪು ಕೊಳೆತು ಹಾಳು। ಸಂಕಷ್ಟದಲ್ಲಿ ಸಾವಿರಾರು ರೈತರು

• ಪ್ರಜೋದಯ ವರದಿ





**ಅರಕಲಗೂಡು:** ಒಂದೆಡೆ ತಂಬಾಕು ಬೆಲೆ ಕುಸಿತ, ಮತ್ತೊಂದೆಡೆ ಮನೆ ಹಾಗು ಗೋದಾಮುಗಳಲ್ಲಿ ದಾಸ್ತಾನಿಟ್ಟಿರುವ ಹೊಗೆಸೊಪ್ಪು ಕೊಳೆತು ಹಾಳಾಗುತ್ತಿರುವ ಪರಿಸ್ಥಿತಿ. ಈ ಎರಡರ ಮಧ್ಯೆ ತಾಲ್ಲೂಕಿನ ತಂಬಾಕು ಬೆಳೆಗಾರರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ.

ರಾಮನಾಥಪುರ ಸುಬ್ರಹ್ಮಣ್ಯನಗರದಲ್ಲಿರುವ ಫ್ಲಾಟ್ಸ್ ಪಾರಂ-7 ಹಾಗು 63ರ ವ್ಯಾಪ್ತಿಯ ಎರಡು ತಂಬಾಕು ಹರಾಜು ಮಾರುಕಟ್ಟೆಗಳಲ್ಲಿ ಈ ಬಾರಿ ನಿರೀಕ್ಷಿತ ಮಟ್ಟದಲ್ಲಿ ವ್ಯಾಪಾರ ನಡೆಯದೇ ರೈತರು ಕಂಗಾಲಾಗಿದ್ದಾರೆ. ಲಕ್ಷಾಂತರ ರೂ. ಸಾಲ ಮಾಡಿ ತಂಬಾಕು ಬೆಳೆದಿದ್ದ ರೈತರು, ಸರಿಯಾದ ಬೆಲೆ ಸಿಗುವ ನಿರೀಕ್ಷೆಯಲ್ಲಿ ತಿಂಗಳಾನುಗಟ್ಟಲೆ ಹೊಗೆಸೊಪ್ಪನ್ನು ಮನೆ ಮತ್ತು ಗೋದಾಮುಗಳಲ್ಲಿ ಸಂಗ್ರಹಿಸಿಟ್ಟಿದ್ದರು. ಆದರೆ, ಬೆಲೆ ಕುಸಿತ ಮತ್ತು ಖರೀದಿದಾರರ ನಿರಾಸಕ್ತಿ ಕಾರಣದಿಂದ ಮಾರಾಟ ವಿಳಂಬವಾಗಿದ್ದು, ದಾಸ್ತಾನಿಟ್ಟಿದ್ದ ತಂಬಾಕಿಗೆ ಶೀತ, ಹುಳು ಹಿಡಿದು ಹಾಳಾಗುತ್ತಿದೆ.

1970ರಿಂದ ಕಾರ್ಯನಿರ್ವಹಿಸುತ್ತಿರುವ ರಾಮನಾಥಪುರ ತಂಬಾಕು ಹರಾಜು ಮಾರುಕಟ್ಟೆ ವ್ಯಾಪ್ತಿಯಲ್ಲಿ ಸುಮಾರು 20 ರಿಂದ 30 ಸಾವಿರ ತಂಬಾಕು ಬೆಳೆಗಾರರು ಅವಲಂಬಿತರಾಗಿದ್ದಾರೆ. ಹಾಸನ ಜಿಲ್ಲೆಯಷ್ಟೇ ಅಲ್ಲದೆ ಸುತ್ತಮುತ್ತಲಿನ ಭಾಗಗಳ ರೈತರೂ ಇಲ್ಲಿನ ಮಾರುಕಟ್ಟೆಯನ್ನು ನಂಬಿಕೊಂಡಿದ್ದಾರೆ.

ಈ ಬಾರಿ ಹರಾಜು ಆರಂಭದ ದಿನಗಳಲ್ಲಿ ಉತ್ತಮ ಗುಣಮಟ್ಟದ ತಂಬಾಕಿಗೆ ಪ್ರತಿ ಕೆಜಿಗೆ 320 ರಿಂದ 325 ರೂ. ವರೆಗೆ ದರ ದೊರಕಿತ್ತು. ಅದರಿಂದ ಮುಂದಿನ ದಿನಗಳಲ್ಲಿ ಇನ್ನಷ್ಟು ಬೆಲೆ ಏರಿಕೆಯಾಗಬಹುದೆಂಬ ನಿರೀಕ್ಷೆ ರೈತರಲ್ಲಿ ಮೂಡಿತ್ತು. ಆದರೆ ಕೆಲವು ವಾರಗಳಲ್ಲೇ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಈಗ ಉತ್ತಮ ಗುಣಮಟ್ಟದ ತಂಬಾಕಿಗೂ 150 ರಿಂದ 180 ರೂ. ವರೆಗೆ ದರ ಇಳಿಕೆಯಾಗಿದೆ ಎಂದು ರೈತರು ಆರೋಪಿಸಿದ್ದಾರೆ. ಕೆಳದರ್ಜೆಯ ಬೇಲ್‌ಗಳಿಗೆ 100 ಕ್ಕೂ ಕಡಿಮೆ ದರ ಸಿಗುತ್ತಿರುವುದು ರೈತರ ಆಕ್ರೋಶಕ್ಕೆ ಕಾರಣವಾಗಿದೆ.

**ಹರಾಜು ಸ್ಥಗಿತದ ಪರಿಣಾಮ**

ಜನವರಿ ಮೂರನೇ ವಾರದಲ್ಲಿ ಕೇಂದ್ರ ಸರ್ಕಾರ ತಂಬಾಕು ಮೇಲಿನ ಅಬಕಾರಿ ಸುಂಕ ಮತ್ತು ಜಿಎಸ್‌ಟಿ ಹೆಚ್ಚಿಸಬಹುದೆಂಬ ಆತಂಕ ವ್ಯಕ್ತವಾಗುತ್ತಿದ್ದಂತೆಯೇ ಕಂಪನಿಗಳು ಏಕಾಏಕಿ ಹರಾಜು ಪ್ರಕ್ರಿಯೆ ಸ್ಥಗಿತಗೊಳಿಸಿದ್ದವು. ಅದರಿಂದ ಈಗಾಗಲೇ ತಂಬಾಕು ಮಾರಾಟಕ್ಕೆ ಸಿದ್ಧರಾಗಿದ್ದ ರೈತರು ಸಂಕಷ್ಟಕ್ಕೆ ಸಿಲುಕಿದ್ದರು.ಸುಮಾರು ಎರಡು ವಾರಗಳ ಬಳಿಕ ಹರಾಜು ಪ್ರಕ್ರಿಯೆ ಪ್ರಾರಂಭವಾದರೂ ರೈತರು ನಿರೀಕ್ಷಿಸಿದ್ದ ಮಟ್ಟದಲ್ಲಿ ದರ ಏರಿಕೆಯಾಗಲಿಲ್ಲ. ವಿಶೇಷ ವಾಗಿ ಆಂಧ್ರಪ್ರದೇಶ ಮಾರುಕಟ್ಟೆ ದರದ ಮಾದರಿಯಲ್ಲಿ ಬೆಲೆ ನಿಗದಿಪಡಿಸಬೇಕೆಂಬ ರೈತರ ಬೇಡಿಕೆ ಈಡೇರಲಿಲ್ಲ.

**ಕೆಲವು ಬೇಲ್‌ಗಳಿಗೆ ಬಿಡ್ ಕೂಡ ಇಲ್ಲ**


ರಾಮನಾಥಪುರ ಮಾರುಕಟ್ಟೆಯಲ್ಲಿ ಕೆಳದರ್ಜೆಯ ಬೇಲ್‌ಗಳನ್ನು ಸುಮಾರು 100 ದರದಲ್ಲಿ ಖರೀದಿಸಲಾಗುತ್ತಿದೆ. ಕೆಲವು ಬೇಲ್‌ಗಳಿಗೆ ಬಿಡ್ ಕೂಡ ಆಗುತ್ತಿಲ್ಲ. ಇನ್ನೂ 10 ರಿಂದ 12 ದಿನಗಳಲ್ಲಿ ಹರಾಜು ಪ್ರಕ್ರಿಯೆ ಮುಕ್ತಾಯಗೊಳ್ಳುವ ಸಾಧ್ಯತೆ ಇದೆ. ಮುಂದಿನ ದಿನಗಳಲ್ಲಿ ಬೇಡಿಕೆ ಹೆಚ್ಚಾದರೆ ಕೆಳದರ್ಜೆಯ ಬೇಲ್‌ಗಳ ಖರೀದಿ ಹೆಚ್ಚಾಗುವ ಸಾಧ್ಯತೆಯಿದೆ ಎಂದು ತಂಬಾಕು ಮಾರುಕಟ್ಟೆ ಹರಾಜು ಅಧೀಕ್ಷಕ ಕೋಟೇಶ್ ರಾವ್ ಅವರು ತಿಳಿಸಿದ್ದಾರೆ.

**ಮಾರುಕಟ್ಟೆಯಲ್ಲಿ ಬೇಕಾಬಿಟ್ಟಿ ದರ**

ರೈತ ಮುಖಂಡ ಮಂಜುನಾಥ್ ಮಲ್ಲಾಪುರ ಮಾತನಾಡಿ, ತಂಬಾಕು ಉತ್ಪಾದಿಸಿದ ರೈತರ ಸ್ಥಿತಿ ಚಿಂತಾಜನಕವಾಗಿದೆ. ಮಾರುಕಟ್ಟೆಯಲ್ಲಿ 320 ಇದ್ದ ದರ 100ರ ವರೆಗೆ ಕುಸಿದಿದೆ. ಕೆಳ ದರ್ಜೆಯ ಬೇಲ್‌ಗಳನ್ನು ಖರೀದಿಸಲು ವರ್ತಕರು ಮುಂದೆ ಬರುತ್ತಿಲ್ಲ. ವಿದೇಶಗಳಲ್ಲಿ ಇಲ್ಲಿನ ಹೊಗೆಸೊಪ್ಪಿಗೆ ಉತ್ತಮ ಬೇಡಿಕೆ ಇದ್ದರೂ ಸ್ಥಳೀಯ ಮಾರುಕಟ್ಟೆಯಲ್ಲಿ ಬೇಕಾಬಿಟ್ಟಿ ದರ ನೀಡಲಾಗುತ್ತಿದೆಂದು ದೂರಿದರು.

# ಜಿಲ್ಲೆಯಲ್ಲಿ ಮಾದಕ ವಸ್ತು ತಡೆಗೆ ಟಾಸ್ಕ್‌ಫೋರ್ಸ್

» ಮೊದಲನೇ ಪುಟದಿಂದ




ಲಾಗಿದೆ. ಜಿಲ್ಲೆಯ ವಿವಿಧ ಡಿ-ಅಡಿಕ್ಷನ್ ಕೇಂದ್ರಗಳಿದ್ದು, ಅವುಗಳಲ್ಲಿ ಈಗಾಗಲೇ 183ಕ್ಕೂ ಹೆಚ್ಚು ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಜಿಲ್ಲೆಯಲ್ಲಿ ಸುಮಾರು 40 ವ್ಯಸನಮುಕ್ತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳ ಮೇಲ್ವಿಚಾರಣೆಯನ್ನೂ ಬಲಪಡಿಸಲು ಜಿಲ್ಲಾಡಳಿತ ಸೂಚಿಸಿದೆ. ಕೇಂದ್ರ ಸರ್ಕಾರದ ನಶಾ ಮುಕ್ತ ಭಾರತ ಅಭಿಯಾನ ಮತ್ತು ಐಡಾಮ್ಸ್ ಪೋರ್ಟಲ್ ಅಡಿಯಲ್ಲಿ ದೇಶಾದ್ಯಂತ ಡ್ರಗ್ ಡಿ-ಅಡಿಕ್ಷನ್ ಹಾಗು ಪುನರ್ವಸತಿ ಕಾರ್ಯಕ್ರಮಗಳನ್ನು ವಿಸ್ತರಿಸಲಾಗುತ್ತಿದೆ.

**ಗಾಂಜಾವೇ ದೊಡ್ಡ ಸವಾಲು**

ಪೊಲೀಸ್ ಮೂಲಗಳ ಪ್ರಕಾರ ಕಾಲೇಜು ವಿದ್ಯಾರ್ಥಿಗಳು ಮತ್ತು ಹೊರ ರಾಜ್ಯಗಳಿಂದ ಬರುವ ಕಾರ್ಮಿಕರನ್ನು ಗುರಿಯಾಗಿಸಿಕೊಂಡು ಸಣ್ಣ ಮಟ್ಟದ ಡ್ರಗ್ ಜಾಲಗಳು ಕಾರ್ಯ ನಿರ್ವಹಿಸುತ್ತಿವೆ. ವಿಶೇಷವಾಗಿ ಗಾಂಜಾ ಪೂರೈಕೆ ಸರಪಳಿಯನ್ನು ನಿಯಂತ್ರಿಸುವುದು ದೊಡ್ಡ ಸವಾಲಾಗಿದೆ.

ಜಿಲ್ಲೆಯಲ್ಲಿ ವಾರ್ ಅಗೇನ್ಸ್ ಡ್ರಗ್ಸ್ ಅಭಿಯಾನ ಆರಂಭಿಸಿರುವ ಜಿಲ್ಲಾ ಪೊಲೀಸ್ ಇಲಾಖೆ, ಗಾಂಜಾ ಮಾರಾಟಗಾರರ ವಿರುದ್ಧ ನಿರಂತರ ಕಾರ್ಯಾಚರಣೆ ನಡೆಸುತ್ತಿದೆ. ಕೆಲ ಪ್ರಕರಣಗಳಲ್ಲಿ ವಿದ್ಯಾರ್ಥಿಗಳನ್ನು ಬಳಸಿ ಡ್ರಗ್ಸ್ ವಿತರಣೆಗೆ ಯತ್ನಿಸಲಾಗುತ್ತಿರುವುದು ತನಿಖೆ ಯಲ್ಲಿ ಬೆಳಕಿಗೆ ಬಂದಿದೆ. ಈಗಾಗಲೇ ನೂರಾರು ಕೆಜಿಯಷ್ಟು ಗಾಂಜಾ ವಶಪಡಿಸಿಕೊಳ್ಳಲಾಗಿದೆ.

ಜಿಲ್ಲೆಯಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ ದಾಖಲಾಗುತ್ತಿರುವ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದೆ. ಸಾರ್ವಜನಿಕ ಸ್ಥಳಗಳಲ್ಲಿ ಮಾದಕ ವ್ಯಸನಿಗಳು ಅನುಮಾನಾಸ್ಪದವಾಗಿ ಓಡಾಡುವವರನ್ನು ಹಿಡಿದು ಹಿಮ್ಸ್ ಆಸ್ಪತ್ರೆಗೆ ತಂದು ಪರೀಕ್ಷೆಗೆ ಒಳಪಡಿಸಿದಾಗ ಗಾಂಜಾ, ಡ್ರಗ್ಸ್ ಸೇವನೆ ದೃಢಪಡುತ್ತಿರುವ ಸಂಖ್ಯೆ ಹೆಚ್ಚುತ್ತಿವೆ. ಹೀಗೆ ತಪಾಸಣೆಗೆ ಒಳಪಡಿಸಿದವರಲ್ಲಿ ಏಪ್ರಿಲ್ ತಿಂಗಳಲ್ಲಿ 53 ಪ್ರಕರಣ, ಮಾರ್ಚ್‌ನಲ್ಲಿ 51, ಫೆಬ್ರವರಿ ತಿಂಗಳಲ್ಲಿ 33 ಜನರು ಗಾಂಜಾ, ಡ್ರಗ್ಸ್ ಸೇವನೆ ಮಾಡಿರುವುದು ದೃಢಪಟ್ಟಿದೆ.

**ಗ್ರಾಮ ಮಟ್ಟದ ಜಾಗೃತಿ ಅವಶ್ಯ**

ಜಿಲ್ಲಾಡಳಿತ ಶಾಲಾ- ಕಾಲೇಜು, ಹಾಸ್ಟೆಲ್, ಪ್ರವಾಸಿ ತಾಣಗಳು ಹಾಗು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ತೀರ್ಮಾನಿಸಿದೆ. ಯುವಕರಲ್ಲಿ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ ಮತ್ತು ಸಮಾಲೋಚನಾ ಶಿಬಿರಗಳ ಮೂಲಕ ವ್ಯಸನದಿಂದ ದೂರವಿಡುವ ಪ್ರಯತ್ನಕ್ಕೂ ಒತ್ತು ನೀಡಲಾಗಿದೆ. ಡ್ರಗ್ಸ್ ವಿರುದ್ಧದ ಹೋರಾಟ ಕೇವಲ ಕಾನೂನು ಜಾರಿ ಇಲಾಖೆಯ ಹೊಣೆಗಾರಿಕೆಯಾಗದೇ, ಪೋಷಕರು, ಶಿಕ್ಷಕರು, ಸಮಾಜ ಮತ್ತು ಆಡಳಿತ ಸೇರಿ ಎದುರಿಸಬೇಕಾದ ಸಾಮಾಜಿಕ ಸವಾಲಾಗಿದೆ ಎಂಬ ಅರಿವು ಈಗ ಹೆಚ್ಚುತ್ತಿದೆ.

# ರಾಜ್ಯ ಸರ್ಕಾರಿ ನೌಕರರ ತುಟ್ಟಿಭತ್ಯೆ ಹೆಚ್ಚಳ

• ಪ್ರಜೋದಯ ವರದಿ



**ಬೆಂಗಳೂರು:** ರಾಜ್ಯ ಸರ್ಕಾರಿ ನೌಕರರು ಹಾಗೂ ನಿವೃತ್ತ ವೇತನದಾರರಿಗೆ ರಾಜ್ಯ ಸರ್ಕಾರ ಸಿಹಿ ಸುದ್ದಿ ನೀಡಿದ್ದು, ತುಟ್ಟಿಭತ್ಯೆಯ ದರಗಳನ್ನು ಪ್ರಸ್ತುತ ಮೂಲ ವೇತನದ ಶೇ.14.25ರಿಂದ ಶೇ.15.75ಕ್ಕೆ ಹೆಚ್ಚಿಸಿ ಆದೇಶ ಹೊರಡಿಸಿದೆ.

2024ರ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ವೇತನವನ್ನು ಪಡೆಯುತ್ತಿರುವ ರಾಜ್ಯ ಸರ್ಕಾರಿ ನೌಕರರುಗಳಿಗೆ 1ನೇ ಜನವರಿ 2026ರಿಂದ ಜಾರಿಗೆ ಬರುವಂತೆ ತುಟ್ಟಿಭತ್ಯೆ ದರಗಳನ್ನು ಪರಿಷ್ಕರಿಸಿದೆ.

ರಾಜ್ಯ ಸರ್ಕಾರದ ನಿವೃತ್ತಿ ವೇತನದಾರರು, ಕುಟುಂಬ ನಿವೃತ್ತಿ ವೇತನದಾರರಿಗೆ ಮತ್ತು ರಾಜ್ಯದ ಸಂಚಿತ ನಿಧಿಯಿಂದ ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನವನ್ನು ಪಡೆ ಯುತ್ತಿರುವಂತಹ ಅನುದಾನಿತ ಶಿಕ್ಷಣ ಸಂಸ್ಥೆಗಳ ನಿವೃತ್ತಿ ವೇತನದಾರರು, ಕುಟುಂಬ ನಿವೃತ್ತಿ ವೇತನದಾರರಿಗೂ ಸಹ ದಿನಾಂಕ 1ನೇ ಜನವರಿ 2026 ರಿಂದ ಜಾರಿಗೆ ಬರುವಂತೆ ಹಾಲಿ ಲಭ್ಯವಿರುವ ತುಟ್ಟಿಭತ್ಯೆಯ ದರಗಳನ್ನು ಮೂಲ ನಿವೃತ್ತಿ ವೇತನ, ಕುಟುಂಬ ನಿವೃತ್ತಿ ವೇತನದ ಪ್ರಸಕ್ತ ಶೇ.14.25 ರಿಂದ ಶೇ.15.75ಕ್ಕೆ ಹೆಚ್ಚಿಸಲಾಗಿದೆ.

ಒಟ್ಟಾರೆಯಾಗಿ ರಾಜ್ಯ ಸರ್ಕಾರಿ ನೌಕರರು ಹಾಗೂ ನಿವೃತ್ತರ ತುಟ್ಟಿಭತ್ಯೆಯನ್ನು ಜನವರಿ 1ರಿಂದಲೇ ಪೂರ್ವಾನ್ವಯವಾಗುವಂತೆ ಶೇ.1.50ರಷ್ಟು ಹೆಚ್ಚಿಸಲಾಗಿದೆ. ನಿವೃತ್ತ ನೌಕರರ ತುಟ್ಟಿಭತ್ಯೆ ಮಂಜೂರಾತಿಗೆ ಒತ್ತಾಯ.

# ಆರ್ಥಿಕ ಸದೃಢತೆಗೆ ಹೈನುಗಾರಿಕೆ ಸಹಕಾರಿ



• ಪ್ರಜೋದಯ ವರದಿ

**ರಾಮನಾಥಪುರ:** ರೈತರು ಕೃಷಿಯ ಜೊತೆಗೆ ಹೈನುಗಾರಿಕೆ ಅಳವಡಿಸಿಕೊಂಡು ಆರ್ಥಿಕವಾಗಿ ಸದೃಢರಾಗಬೇಕೆಂದು ಶಾಸಕ ಎ.ಮಂಜು ಅವರು ಸಲಹೆ ನೀಡಿದರು.

ಮಲ್ಲಿಪಟ್ಟಣ ಹೋಬಳಿಯ ಗೇರುಕುಪ್ಪೆ ಗ್ರಾಮದಲ್ಲಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ನಾನು ಪಶು ಸಂಗೋಪನೆ ಸಚಿವರಾಗಿದ್ದ ಅವಧಿಯಲ್ಲಿ ರೈತರ ಅನುಕೂಲಕ್ಕಾಗಿ ಹೈನುಗಾರಿಕೆಗೆ ಹೆಚ್ಚಿನ ಉತ್ತೇಜನ ನೀಡಲಾಗಿತ್ತು ಎಂದು ತಿಳಿಸಿದರು.

ಗ್ರಾಮೀಣ ಪ್ರದೇಶದ ರೈತ ಕುಟುಂಬಗಳು ಹೈನುಗಾರಿಕೆ ಮೂಲಕ ಆರ್ಥಿಕ ಸ್ವಾವಲಂಬನೆ ಸಾಧಿಸಿ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಸಾಧ್ಯವಾಗುತ್ತದೆ. ಈ ಹಿನ್ನಲೆಯಲ್ಲಿ ಮುಂದಿನ ದಿನಗಳಲ್ಲಿ ಬಿ.ಎಂ.ಸಿ. ಕೇಂದ್ರಗಳನ್ನು ಸ್ಥಾಪಿಸುವುದಾಗಿ ಭರವಸೆ ನೀಡಿದರು.

ಖಾಸಗಿ ಡೇರಿಗಳಿಗೆ ಅವಲಂಬಿತರಾಗದೆ ಮಹಿಳಾ ಸಹಕಾರ ಸಂಘಗಳ ಮೂಲಕ ಹಾಲು ಪೂರೈಕೆ ಮಾಡಿದರೆ ಸರ್ಕಾರದ ವಿವಿಧ ಸಹಾಯಧನ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುತ್ತದೆ. ರೈತರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಸರ್ಕಾರ ಹೈನುಗಾರಿಕೆಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದು, ಮಹಿಳಾ ಸಹಕಾರ ಸಂಘಗಳ ಬಲವರ್ಧನೆಯಿಂದ ಗ್ರಾಮೀಣ ಮಹಿಳೆಯರ ಆರ್ಥಿಕ ಸ್ಥಿತಿಯೂ ಉತ್ತಮಗೊಳ್ಳಲಿದೆ ಎಂದು ಹೇಳಿದರು. ಅರಕಲಗೂಡು ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಹೊನ್ನವಳ್ಳಿ ಸತೀಶ್ ಸೇರಿ ಹಲವರು ಉಪಸ್ಥಿತರಿದ್ದರು.

# ಅಪಘಾತ : ಗಾಯಗೊಂಡಿದ್ದ 7 ಮಂದಿಗೆ ಎಂಎಂಎಂ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ

» ಮೊದಲನೇ ಪುಟದಿಂದ

ಗುಣಮುಖರಾಗಿದ್ದಾರೆಂದು ಹೇಳಿದರು.

ಬಿಎಸ್‌ಪಿ ರಾಜ್ಯ ಉಪಾಧ್ಯಕ್ಷ ಗಂಗಾಧರ್ ಬಹುಜನ್ ಅವರು ಮಾತನಾಡಿ, ಗಾಯಾಳು ಎಲ್ಲರೂ ತೋಟದ ಕಾರ್ಮಿಕರು. ಆಸ್ಪತ್ರೆಗೆ ಕರೆದುಕೊಂಡು ಬರುವಾಗ ಹಣಕಾಸು ವಿಷಯದಲ್ಲಿ ಆತಂಕವಿತ್ತು. ಇದೀಗ ಸರ್ಕಾರ ಪರಿಹಾರ ಕೊಡುವುದಾಗಿ ಹೇಳಿದೆ. ಆದರೆ, ಈವರೆಗೂ ಪರಿಹಾರ ಹಣ ಬಿಡುಗಡೆ ಆಗಿಲ್ಲ. ಆಸ್ಪತ್ರೆಯವರು 1 ರೂ. ಪಡೆಯದೆ ಚಿಕಿತ್ಸೆ ನೀಡಿದ್ದಾರೆ. ಬಾಲಕಿಗೆ ಪುನರ್ಜನ್ಮ ನೀಡಿದ್ದಾರೆ. ಇದೊಂದು ವಿಶೇಷ ಪ್ರಕರಣವಾಗಿದ್ದು, ಎಲ್ಲರಿಗೂ ಧನ್ಯವಾದ ತಿಳಿಸುವುದಾಗಿ ಹೇಳಿದರು.

ಗಾಯಾಳು ಸಂಬಂಧಿ ಉಷಾ ಮಾತನಾಡಿ, ಅಂದು ಪಟಾಕಿ ಶಬ್ದದಲ್ಲಿ ಕಾರು ಹೇಗೆ ಬಂತೋ ಗೊತ್ತಿಲ್ಲ. ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲು ಮಾಡಿದಾಗ ಯಾರನ್ನು ಬದುಕಿಸಿಕೊಳ್ಳಬೇಕೆಂಬುದು ಗೊತ್ತಾಗಲಿಲ್ಲ, ಅನೇಕರಿಗೆ ಪ್ರಜ್ಞೆಯೇ ಇರಲಿಲ್ಲ. ವೈದ್ಯರು ನಮ್ಮ ಪಾಲಿಗೆ ದೇವರಾಗಿ ಬಂದು ಎಲ್ಲರ ಜೀವ ಉಳಿಸಿದರೆಂದು ಕಣ್ಣೀರಿಟ್ಟರು. ಡಾ||ಮನೋಜ್ ಕುಮಾರ್, ಡಾ||ಪವಿತ್ರ, ಆಡಳಿತಾಧಿಕಾರಿ ಬಿಳಿಗಿರಿ ಇದ್ದರು.

# ಮೇ 13ರಿಂದ 15ರವರೆಗೆ ಟ್ರಂಪ್ ಚೀನಾ ಪ್ರವಾಸ

• ಪ್ರಜೋದಯ ವರದಿ

**ಬೀಜಿಂಗ್:** ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರ ಆಹ್ವಾನದ ಮೇರೆಗೆ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮೇ 13ರಿಂದ 15ರ ವರೆಗೆ ಚೀನಾ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರರು ತಿಳಿಸಿದ್ದಾರೆ.

ಕಳೆದ ಒಂಬತ್ತು ವರ್ಷಗಳಲ್ಲಿಯೇ ಅಮೇರಿಕಾ ಅಧ್ಯಕ್ಷರೊಬ್ಬರು ಚೀನಾಕ್ಕೆ ಭೇಟಿ ನೀಡುತ್ತಿರು ವುದು ಇದೇ ಮೊದಲು. ಟ್ರಂಪ್ ಅವರು ಮೊದಲ ಅವಧಿ ಅಧ್ಯಕ್ಷರಾಗಿದ್ದ ವೇಳೆಯೂ ಚೀನಾಕ್ಕೆ ಭೇಟಿ ನೀಡಿದ್ದರು.

ಅಮೇರಿಕಾ ಹಾಗೂ ಇಸ್ರೇಲ್ ಇರಾನ್ ಮೇಲೆ ಜಂಟಿಯಾಗಿ ದಾಳಿ ನಡೆಸಿದ ಕಾರಣ ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಸಂಘರ್ಷ, ಹೊರ್ಮುಜ್ ಜಲಸಂಧಿಯಲ್ಲಿ ಸರಕು ಸಾಗಣೆ ಹಡಗುಗಳ ಮೇಲೆ ನಿರ್ಬಂಧ ದಿಂದ ಜಾಗತಿಕ ಮಟ್ಟದಲ್ಲಿ ಉಲ್ಬಣಗೊಂಡಿರುವ ಇಂಧನ ಬಿಕ್ಕಟ್ಟು, ತೈವಾನ್ ಸೇರಿ ಹಲವು ವಿಷಯಗಳ ಕುರಿತಂತೆ ಚೀನಾ-ಅಮೇರಿಕಾ ನಡುವಿನ ಉದ್ವಿಗ್ನತೆ ನಡುವೆ ಉಭಯ ನಾಯಕರ ಭೇಟಿಯು ಮಹತ್ವ ಪಡೆದುಕೊಂಡಿದೆ.

ಡೊನಾಲ್ಡ್ ಟ್ರಂಪ್ ಅವರು ಬುಧವಾರ ಬೀಜಿಂಗ್‌ಗೆ ಬಂದಿಳಿಯಲಿದ್ದಾರೆ. ಸಾಂಕೇತಿಕವಾಗಿ ಇದು ಮಹತ್ವದ ಭೇಟಿಯಾಗಿದೆ ಎಂದು ಅಮೇರಿಕಾದ ಪ್ರಧಾನ ಉಪ ಪತ್ರಿಕಾ ಕಾರ್ಯದರ್ಶಿ ಅನ್ನ ಕೆಲ್ಲಿ ತಿಳಿಸಿದ್ದಾರೆ.

ಟ್ರಂಪ್ ಅವರು ಗುರುವಾರ ಸ್ವಾಗತ ಸಮಾರಂಭದಲ್ಲಿ ಭಾಗವಹಿಸಿ, ಆಮೇಲೆ ಜಿನ್‌ಪಿಂಗ್ ಜೊತೆಗೆ ದ್ವಿಪಕ್ಷೀಯ ಸಭೆ ನಡೆಸಲಿದ್ದಾರೆ. ನಂತರ ಟೆಂಪಲ್ ಆಫ್ ಹೆವನ್‌ನಲ್ಲಿ ಆಯೋಜಿಸಿ ರುವ ಔತಣ ಕೂಟದಲ್ಲಿ ಭಾಗಿಯಾಗಲಿದ್ದಾರೆಂದು ಹಾಂಗ್‌ಕಾಂಗ್‌ನ ಸೌತ್ ಚೈನಾ ಮಾರ್ನಿಂಗ್ ಪೋಸ್ಟ್ ವರದಿ ಮಾಡಿದೆ.

# ಬೈಕ್‌ಗೆ ಕಾರು ಡಿಕ್ಕಿ: ತಂದೆ-ಮಗ ಸಾವು



• ಪ್ರಜೋದಯ ವರದಿ

**ಹಾಸನ:** ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್‌ನಲ್ಲಿದ್ದ ಅಪ್ಪ, ಮಗ ಧಾರುಣವಾಗಿ ಸಾನ್ನಪ್ಪಿ, ಪತ್ನಿ ಹಾಗು ಮತ್ತೊಬ್ಬ ಪುತ್ರ ಗಂಭೀರವಾಗಿ ಗಾಯಗೊಂಡಿರುವ ಘಟನೆ ಬಿಟ್ಟಗೌಡನ ಹಳ್ಳಿ ದೇವೇಗೌಡ ನಗರದ ಬಳಿ ನಡೆದಿದೆ. ಜಯಣ್ಣ (38) ಮಿಥುನ್ ಜೈ (6) ಮೃತರು. ಜಯಣ್ಣ ಪತ್ನಿ ರಜಿನಿ ಹಾಗು ಮತ್ತೊಬ್ಬ ಮಗ ಮಿಲನ್ ಜೈ ಗಾಯಾಳುಗಳು.

ಬೈಕ್‌ನಲ್ಲಿ ಗೊರೂರಿನಿಂದ ಹಾಸನಕ್ಕೆ ಬಂದಿದ್ದ ದಂಪತಿ ಹಾಗು ಇಬ್ಬರು ಮಕ್ಕಳು ಕಾರ್ಯಕ್ರಮ ಮುಗಿಸಿಕೊಂಡು ಹಾಸನದಿಂದ ಗೊರೂರಿಗೆ ಬೈಕ್‌ನಲ್ಲಿ ಮನೆಗೆ ವಾಪಾಸ್ ತೆರಳುತ್ತಿದ್ದರು. ಈ ವೇಳೆ ಅರಕಲಗೂಡು ಕಡೆಯಿಂದ ಹಾಸನದ ಕಡೆಗೆ ಬರುತ್ತಿದ್ದ ಟಾಟಾ ಟಿಯಾಗೋ ಕಾರು ಓವರ್ ಟೇಕ್ ಮಾಡಲು ಹೋಗಿ ಬೈಕ್‌ಗೆ ಕಾರು ಡಿಕ್ಕಿ ಹೊಡೆದಿದೆ. ಸ್ಥಳದಲ್ಲೇ ಮಿಥುನ್ ಜೈ ಸಾವನ್ನಪ್ಪಿದ್ದು, ತಂದೆ ಜಯಣ್ಣ ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಗಾಯಾಳುಗಳಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

# ಶೇಖರ್ ಸಂಕೋಡನಹಳ್ಳಿ ಅವಿರೋಧ ಆಯ್ಕೆ

• ಪ್ರಜೋದಯ ವರದಿ



**ಅರಸೀಕೆರೆ:** ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲ್ಲೂಕು ಘಟಕದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಶೇಖರಪ್ಪ (ಶೇಖರ್ ಸಂಕೋಡನಹಳ್ಳಿ) ಅವರು ಅವಿರೋಧ ಆಯ್ಕೆಯಾದರು.

20 ನಿರ್ದೇಶಕ ಸ್ಥಾನಗಳಿಗೂ ಅವಿರೋಧ ಆಯ್ಕೆ ನಡೆಸಲಾಯಿತು. ಚಂದ್ರಶೇಖರ್, ಶಶಿಧರ್, ಅನಿಲ್ ಕುಮಾರ್, ಪವನ್, ಜಗದೀಶ್, ವಿರೂಪಾಕ್ಷಪ್ಪ, ಆನಂದ, ಕುಮಾರ್, ಭರತೇಶ್, ರಾಘವೇಂದ್ರ, ಲೋಕೇಶ್, ಓಂಕಾರಮೂರ್ತಿ,ಮಲ್ಲೇಶ್ ಸಾಮಾನ್ಯ ಕ್ಷೇತ್ರದ ನಿರ್ದೇಶಕರಾಗಿದ್ದಾರೆ.

ಹೇಮಾವತಿ, ಗೌರಮ್ಮ, ಸರೋಜಾ, ರತ್ನ, ಶೈಲಜಾ, ಪ್ರೇಮಾ ಮಹಿಳಾ ಕ್ಷೇತ್ರದಲ್ಲಿ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಸಹಾಯಕ ಚುನಾವಣಾಧಿಕಾರಿ ಎ.ಎಲ್. ಮೋಹನ್ ಕುಮಾರ್ ತಿಳಿಸಿದ್ದಾರೆ.

# ಶೃಂಗೇರಿ ಶಾಸಕರಾಗಿ ರಾಜೇಗೌಡ ಮುಂದುವರಿಕೆ

## ಹೈಕೋರ್ಟ್ ನೀಡಿದ್ದ ಆದೇಶಕ್ಕೆ ಸುಪ್ರೀಂ ತಡೆ

• ಪ್ರಜೋದಯ ವರದಿ



**ನವದೆಹಲಿ:** ಶೃಂಗೇರಿ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆಗೆ ಸೂಚಿಸಿದ್ದ ಕರ್ನಾಟಕ ಹೈಕೋರ್ಟ್‌ನ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದ ಮಾಜಿ ಶಾಸಕ ಟಿ.ಡಿ. ರಾಜೇಗೌಡ ಅವರಿಗೆ ತಾತ್ಕಾಲಿಕ ರಿಲೀಫ್ ಸಿಕ್ಕಿದೆ.

ರಾಜೇಗೌಡ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ನ್ಯಾಯ ಮೂರ್ತಿಗಳಾದ ಸಂಜಯ್ ಕುಮಾರ್, ಕೆ.ವಿನೋದ್ ಚಂದ್ರನ್ ಅವರನ್ನೊಳಗೊಂಡ ಪೀಠವು ಏ.6ರಂದು ಕರ್ನಾಟಕ ಹೈಕೋರ್ಟ್ ನೀಡಿದ್ದ ಆದೇಶದ ಅನ್ವಯ ಕೈಗೊಳ್ಳಲಾದ ಎಲ್ಲಾ ಕ್ರಮಗಳನ್ನು ತಡೆಹಿಡಿಯುವಂತೆ ಸೂಚಿಸಿದೆ. ಮಧ್ಯಂತರ ಕ್ರಮವಾಗಿ ರಾಜೇಗೌಡ ಅವರನ್ನು ಶಾಸಕ ಸ್ಥಾನದಲ್ಲಿ ಮುಂದುವರಿಯಲು ಸೂಚಿಸಿದೆ.

ಸುಪ್ರೀಂ ಕೋರ್ಟ್ ಆದೇಶದಿಂದ ಬಿಜೆಪಿ ನಾಯಕ ಡಿ.ಎನ್.ಜೀವರಾಜ್ ಅವರಿಗೆ ತೀವ್ರ ಹಿನ್ನಡೆಯಾಗಿದೆ. ರಾಜೇಗೌಡ ಪರವಾಗಿ ಹಿರಿಯ ವಕೀಲರಾದ ಕಪಿಲ್ ಸಿಬಲ್, ಮುಕುಲ್ ರೋಹಟಗಿ ಹಾಗು ದೇವದತ್ ಕಾಮತ್ ಅವರು ಹೈಕೋರ್ಟ್ ಆದೇಶದ ಸಿಂಧುತ್ವವನ್ನು ಪ್ರಶ್ನಿಸಿದ್ದರು. ಜೀವರಾಜ್ ಪರವಾಗಿ ಹಾಜರಿದ್ದ ಹಿರಿಯ ವಕೀಲ ವಿ.ಗಿರಿ ಅವರು, ಜೀವರಾಜ್ ಅವರು ಈಗಾಗಲೇ ಸ್ಪೀಕರ್ ಅವರಿಂದ ಶಾಸಕರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆಂದು ವಾದಿಸಿದರು.

ಪ್ರಜಾಪ್ರಭುತ್ವವನ್ನು ಈ ರೀತಿ ಹೈಜಾಕ್ ಮಾಡಲು ಸಾಧ್ಯವಿಲ್ಲ ಎಂದು ಹೇಳಿದ ನ್ಯಾಯಪೀಠವು ಕರ್ನಾಟಕ ಸರ್ಕಾರ, ಚುನಾವಣಾ ಆಯೋಗ ಮತ್ತು ಇತರ ಪ್ರತಿವಾದಿಗಳಿಗೆ ನೋಟೀಸ್ ನೀಡಿದೆ. ಜೊತೆಗೆ, ಪ್ರಕರಣದಲ್ಲಿ ಯಥಾಸ್ಥಿತಿ ಕಾಪಾಡುವಂತೆ ಆದೇಶಿಸಿದೆ.

**ಪ್ರಕರಣದ ಹಿನ್ನಲೆ**

2023ರ ವಿಧಾನಸಭಾ ಚುನಾವಣೆಯಲ್ಲಿ ರಾಜೇಗೌಡ ಅವರು ಜೀವರಾಜ್ ಅವರನ್ನು 201 ಮತಗಳ ಅಂತರದಿಂದ ಸೋಲಿಸಿದ್ದರು. 1,811 ಅಂಚೆಮತಗಳು ಚಲಾವಣೆಯಾಗಿದ್ದವು. ರಾಜೇಗೌಡ ಅವರ ಸಮೀಪದ ಪ್ರತಿಸ್ಪರ್ಧಿ ಡಿ.ಎನ್.ಜೀವರಾಜ್ ಹೈಕೋರ್ಟ್‌ಗೆ ಚುನಾವಣಾ ತಕರಾರು ಅರ್ಜಿ ಸಲ್ಲಿಸಿ, ಮರು ಎಣಿಕೆ ಮಾಡಲು ಆದೇಶಿಸಿ ಫಲಿತಾಂಶಗಳನ್ನು ಹೊಸದಾಗಿ ಘೋಷಿಸಲು ಆದೇಶಿಸಬೇಕೆಂದು ಕೋರಿದ್ದರು.

ಹೈಕೋರ್ಟ್ ಆದೇಶದ ಪ್ರಕಾರ, ಈಚೆಗೆ ಮರು ಮತ ಎಣಿಕೆ ನಡೆಸಲಾಗಿತ್ತು. 2023ರಲ್ಲಿ ಸಿಂಧುವಾಗಿದ್ದ 1,540 ಮತಗಳಲ್ಲಿ 255 ಮತಗಳು ಮರು ಮತ ಎಣಿಕೆ ವೇಳೆ ಅಸಿಂಧುವಾಗಿದ್ದರಿಂದ ರಾಜೇಗೌಡ ಅವರ ಶಾಸಕ ಸ್ಥಾನಕ್ಕೆ ಕುತ್ತು ಉಂಟಾಗಿತ್ತು. 52 ಮತಗಳ ಮುನ್ನಡೆ ಸಾಧಿಸಿದ್ದ ಜೀವರಾಜ್ ಅವರನ್ನು ಚುನಾಯಿತ ಎಂದು ಘೋಷಿಸಲಾಗಿತ್ತು.

# ಬಾಂಗ್ಲಾ ಗಡಿಯಲ್ಲಿ ಬೇಲಿ ನಿರ್ಮಾಣಕ್ಕೆ ಬಿಎಸ್‌ಎಫ್‌ಗೆ ಭೂಮಿ ಹಸ್ತಾಂತರ

• ಪ್ರಜೋದಯ ವರದಿ

**ಕೋಲ್ಕತ್ತಾ:** ಪಶ್ಚಿಮ ಬಂಗಾಳದ ನೂತನ ಮುಖ್ಯಮಂತ್ರಿ ಸುವೇಂದು ಅಧಿಕಾರಿ ನೇತೃತ್ವದಲ್ಲಿ ಸೋಮವಾರ (ಮೇ.11) ನಡೆದ ಮೊದಲ ಸಚಿವ ಸಂಪುಟ ಸಭೆಯಲ್ಲಿ ಮಹತ್ವದ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ. ಬಾಂಗ್ಲಾದೇಶದ ಗಡಿಯಲ್ಲಿ ಬೇಲಿ ನಿರ್ಮಾಣ ಮಾಡಲು ಗಡಿ ಭದ್ರತಾ ಪಡೆಗೆ ಭೂಮಿ ಹಸ್ತಾಂತರಿಸಲು ಸಂಪುಟ ಒಪ್ಪಿಗೆ ನೀಡಿದೆ.

ಸಭೆಯ ಬಳಿಕ ಮಾತನಾಡಿದ ಮುಖ್ಯಮಂತ್ರಿ ಸುವೇಂದು ಅಧಿಕಾರಿ, ಬಾಂಗ್ಲಾ ಗಡಿಯಲ್ಲಿ ಬೇಲಿ ನಿರ್ಮಾಣಕ್ಕಾಗಿ ಬಿಎಸ್‌ಎಫ್‌ಗೆ ಭೂಮಿ ಹಸ್ತಾಂತರಿಸುವ ಪ್ರಕ್ರಿಯೆಗೆ ಇಂದಿನಿಂದಲೇ ಚಾಲನೆ ನೀಡಲಾಗು ವುದು. ಮುಂದಿನ 45 ದಿನಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಆಯುಷ್ಮಾನ್ ಭಾರತ್ ಆರೋಗ್ಯ ಯೋಜನೆ ಸೇರಿ ಕೇಂದ್ರದ ವಿವಿಧ ಯೋಜನೆಗಳನ್ನು ತಕ್ಷಣದಿಂದಲೇ ಜಾರಿಗೆ ತರಲು ಸಂಪುಟ ನಿರ್ಧರಿಸಿದೆ. ಈ ಮೂಲಕ ಈ ಹಿಂದೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ನಡುವೆ ಇದ್ದ ಯೋಜನೆಗಳ ಜಾರಿಯ ಬಿಕ್ಕಟ್ಟಿಗೆ ತೆರೆಬಿದ್ದಿದೆ.

ಚುನಾವಣಾ ಪ್ರಚಾರದ ವೇಳೆ ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿದ್ದ ಭರವಸೆಯಂತೆ, ಶಾಲಾ ಶಿಕ್ಷಕರ ಹುದ್ದೆಯ ಅಭ್ಯರ್ಥಿಗಳಿಗೆ ವಯೋಮಿತಿಯಲ್ಲಿ ಐದು ವರ್ಷಗಳ ರಿಯಾಯಿತಿ ನೀಡಲು ಸಂಪುಟ ಅನುಮೋದನೆ ನೀಡಿದೆ. ಸಂವಿಧಾನ ಉಲ್ಲಂಘಿಸಿ ಹಿಂದಿನ ಸರ್ಕಾರ ಜಾರಿಗೆ ತರದಿದ್ದ ಭಾರತೀಯ ನ್ಯಾಯ ಸಂಹಿತೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲು ತೀರ್ಮಾನಿಸ ಲಾಗಿದೆ.

ಗೃಹ ಸಚಿವಾಲಯದ ಜೂನ್ 2025ರ ಜನಗಣತಿ ಸುತ್ತೋಲೆಯನ್ನು ಹಿಂದಿನ ಸರ್ಕಾರ ನಿರ್ಲಕ್ಷಿಸಿತ್ತು. ಈಗ ಅದನ್ನು ತಕ್ಷಣವೇ ಜಾರಿಗೆ ತರಲು ಸಂಪುಟ ಹಸಿರು ನಿಶಾನೆ ತೋರಿಸಿದೆ. ರಾಷ್ಟ್ರೀಯ ಮತ್ತು ರಾಜ್ಯ ಕೇಡರ್ ಅಧಿಕಾರಿಗಳಿಗೆ ಕೇಂದ್ರ ಸರ್ಕಾರದ ವತಿಯಿಂದ ತರಬೇತಿ ನೀಡುವ ಪ್ರಕ್ರಿಯೆಯನ್ನು ಆರಂಭಿಸಲು ಮುಖ್ಯ ಕಾರ್ಯದರ್ಶಿಯವರಿಗೆ ಪೂರ್ಣ ಅಧಿಕಾರ ನೀಡಲಾಗಿದೆ.

# ಕೇರಳ ಸಿಎಂ ಆಯ್ಕೆ ಕಗ್ಗಂಟು: 48 ಗಂಟೆಗಳಲ್ಲಿ ತೀರ್ಮಾನ

• ಪ್ರಜೋದಯ ವರದಿ

**ತಿರುವನಂತಪುರ:** ಕೇರಳಂನ ನೂತನ ಮುಖ್ಯಮಂತ್ರಿ ಯಾರಾಗಬೇಕೆಂಬುದರ ಬಗ್ಗೆ ಮುಂದಿನ 48 ಗಂಟೆಗಳೊಳಗಾಗಿ ತೀರ್ಮಾನ ಹೊರಬೀಳಲಿದೆ ಎಂದು ಕಾಂಗ್ರೆಸ್ ನಾಯಕ ಕೆ.ಮುರಳೀಧರನ್ ಅವರು ಹೇಳಿದ್ದಾರೆ.

ಮುಖ್ಯಮಂತ್ರಿ ಯಾರಾಗುತ್ತಾರೆಂಬ ಬಗ್ಗೆ ನಡೆಯುತ್ತಿರುವ ಚರ್ಚೆಯ ಕುರಿತು ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಕಾಂಗ್ರೆಸ್ ಒಂದು ಪ್ರಜಾಪ್ರಭುತ್ವವಾದಿ ಪಕ್ಷ. ಹೈಕಮಾಂಡ್ ನಾಯಕರು, ಶಾಸಕರು ಹಾಗೂ ಮೈತ್ರಿಕೂಟದ ಪಾಲುದಾರರೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತಾರೆಂದು ತಿಳಿಸಿದ್ದಾರೆ.

ಹೈಕಮಾಂಡ್ ನಾಯಕರು ನಾಳೆ (ಮಂಗಳವಾರ) ಮಾಜಿ ಪಿಸಿಸಿ ಅಧ್ಯಕ್ಷರೊಂದಿಗೆ ಚರ್ಚಿಸಲಿದ್ದಾರೆ. ಮುಖ್ಯಮಂತ್ರಿ ಸ್ಥಾನಕ್ಕೆ ಹೊಸ ಪೀಳಿಗೆಯ ನಾಯಕರು ಮುಂದೆ ಬರುತ್ತಿದ್ದಾರೆ. ಹಾಗಾಗಿ ಸಹಜವಾಗಿಯೇ ಭಿನ್ನಾಭಿಪ್ರಾಯಗಳು ಮತ್ತು ಚರ್ಚೆಗಳು ನಡೆಯುತ್ತಿವೆ. ಇದು ಸಾಮಾನ್ಯ ಎಂದಿದ್ದಾರೆ.

ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಗೆಲುವು ಸಾಧಿಸಿದ್ದು, ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಆಯ್ಕೆಗೆ ಲಾಬಿ ಹೆಚ್ಚಿದೆ. ವಿ.ಡಿ. ಸತೀಸನ್, ರಮೇಶ್ ಚೆನ್ನಿತ್ತಲ, ಕೆ.ಸಿ.ವೇಣುಗೋಪಾಲ್ ಅವರ ಬೆಂಬಲಿಗರು ರಾಜ್ಯದ ವಿವಿಧೆಡೆ ಮುಂದಿನ ಮುಖ್ಯಮಂತ್ರಿ ಎಂಬ ಹೊಕ್ಕಣೆಯುಳ್ಳ ತಮ್ಮ ನಾಯಕರ ಫ್ಲೆಕ್ಸ್, ಬ್ಯಾನರ್ ಹಾಕಿದ್ದಾರೆ. ಈ ಮೂವರ ಬೆಂಬಲಿಗರ ನಡುವೆಯೇ ಫ್ಲೆಕ್ಸ್ ಅಳವಡಿಸಲು ಪೈಪೋಟಿ ಏರ್ಪಟ್ಟಿದೆ.

# ಅಮೇರಿಕಾ ತಿರಸ್ಕರಿಸಿದ ಶಾಂತಿ ಪ್ರಸ್ತಾವನೆಯನ್ನು ಸಮರ್ಥಿಸಿಕೊಂಡ ಇರಾನ್

• ಪ್ರಜೋದಯ ವರದಿ



**ಟೆಹ್ರಾನ್:** ಅಮೇರಿಕಾದೊಂದಿಗಿನ ಸಂಘರ್ಷವನ್ನು ಕೊನೆಗೊಳಿಸಲು ಮತ್ತು ಹೊರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸಲು ಇರಾನ್ ನೀಡಿರುವ ಪ್ರಸ್ತಾವನೆಯು ನ್ಯಾಯಬದ್ಧ ಮತ್ತು ಉದಾರವಾದುದು ಎಂದು ಇರಾನ್ ಸೋಮವಾರ ಪ್ರತಿಪಾದಿಸಿದೆ.

ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಘಾಯ್ ಅವರು ತಮ್ಮ ಬೇಡಿಕೆಗಳನ್ನು ಮಾಧ್ಯಮಗಳ ಮುಂದೆ ವಿವರಿಸಿದ್ದಾರೆ. ಅಮೇರಿಕಾ-ಇರಾನ್ ನಡುವೆ ನಡೆಯುತ್ತಿರುವ ಯುದ್ಧವನ್ನು ತಕ್ಷಣವೇ ನಿಲ್ಲಿಸುವುದು. ಅಮೇರಿಕಾ ಹೇರಿರುವ ಆರ್ಥಿಕ ದಿಗ್ಬಂಧನಗಳನ್ನು ಹಿಂಪಡೆಯುವುದು. ಅಕ್ರಮವಾಗಿ ಮುಟ್ಟುಗೋಲು ಹಾಕಿಕೊಂಡಿರುವ ಇರಾನ್‌ನ ಆಸ್ತಿಗಳನ್ನು ಬಿಡುಗಡೆ ಮಾಡುವುದು. ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಸುರಕ್ಷಿತ ಸಂಚಾರಕ್ಕೆ ಅವಕಾಶ ನೀಡುವುದು. ಲೆಬನಾನ್ ಸೇರಿ ಇಡೀ ಪ್ರದೇಶದಲ್ಲಿ ಶಾಂತಿ ಸ್ಥಾಪಿಸುವುದು ಶಾಂತಿ ಪ್ರಸ್ತಾವನೆಯ ಅಂಶಗಳು ಎಂದು ಬಘಾಯ್ ವಿವರಿಸಿದ್ದಾರೆ.

**ಅಮೇರಿಕಾ ತಿರಸ್ಕಾರ**

ಇರಾನ್‌ನ ಈ ಪ್ರಸ್ತಾವನೆಯನ್ನು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಳ್ಳಿಹಾಕಿದ್ದಾರೆ. ಇರಾನ್‌ನ ಪ್ರತಿಕ್ರಿಯೆಯನ್ನು ಸಂಪೂರ್ಣವಾಗಿ ಸ್ವೀಕಾರಾರ್ಹವಲ್ಲ ಎಂದಿರುವ ಅವರು, ಈ ಕುರಿತು ಸಾಮಾಜಿಕ ಮಾಧ್ಯಮ ಟ್ರೂತ್ ಸೋಷಿಯಲ್‌ನಲ್ಲಿ ಬರೆದುಕೊಂಡಿದ್ದಾರೆ.

**ಮುಂದುವರಿದ ಉದ್ವಿಗ್ನತೆ**

ಒಂದೆಡೆ ರಾಜತಾಂತ್ರಿಕ ಮಾತುಕತೆಗಳು ನಡೆಯುತ್ತಿದ್ದರೆ, ಮತ್ತೊಂದೆಡೆ ಕೊಲ್ಲಿ ರಾಷ್ಟ್ರಗಳಲ್ಲಿ ಆತಂಕ ಮುಂದುವರಿದಿದೆ. ಇರಾನ್‌ನಿಂದ ಉಡಾಯಿಸಲಾದ 2 ಡ್ರೋನ್‌ಗಳನ್ನು ತಡೆಹಿಡಿದಿರುವುದಾಗಿ ಯುನೈಟೆಡ್ ಅರಬ್ ಎಮಿರೇಟ್ಸ್ ಹೇಳಿಕೊಂಡಿದೆ. ಕುವೈತ್ ಕೂಡ ತನ್ನ ವಾಯುಪ್ರದೇಶದಲ್ಲಿ ಶತ್ರು ಡ್ರೋನ್‌ಗಳನ್ನು ಪತ್ತೆಹಚ್ಚಿರುವುದಾಗಿ ತಿಳಿಸಿದೆ. ಆದರೆ, ಈ ದಾಳಿಗಳಿಗೂ ತನಗೂ ಯಾವುದೇ ಸಂಬಂಧವಿಲ್ಲ ಎಂದು ಇರಾನ್ ಸ್ಪಷ್ಟಪಡಿಸಿದೆ.

# ಆಸಕ್ತಿ ದಾರಿ ಆಯ್ಕೆ ಮಾಡಿಕೊಳ್ಳಲು ಸಲಹೆ

• ಪ್ರಜೋದಯ ವರದಿ



**ಹಾಸನ:** ವಿದ್ಯಾರ್ಥಿಗಳು ತಮ್ಮ ಜೀವನದ ಅತ್ಯಮೂಲ್ಯ ಸಮಯವನ್ನು ಎಂದಿಗೂ ವ್ಯರ್ಥ ಮಾಡದೆ ಓದುವ ಸಮಯದಲ್ಲಿ ಗಮನವಿಟ್ಟು ವಿದ್ಯಾಭ್ಯಾಸ ಮಾಡಬೇಕೆಂದು ನಗರಸಭೆ ಇಂಜಿನೀಯರ್ ಕೆ. ಆರ್.ಕವಿತಾ ಅವರು ಹೇಳಿದರು.

ನಗರದ ಆರ್.ಸಿ.ರಸ್ತೆ ಗಂಧದಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ವತಿಯಿಂದ ಸೋಮವಾರ ನಡೆದ ಚೋಮನ ದುಡಿ ಕಾದಂಬರಿ ಕುರಿತ ವಿಮರ್ಶೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯುವಕರು ಜಾತಿಯನ್ನು ತೊರೆದು ಪ್ರತಿಯೊಬ್ಬರ ಮೇಲು ಹೃದಯವಂತಿಕೆ ಮತ್ತು ಮಾನವೀಯತೆ ಗುಣ ಗಳನ್ನು ಬೆಳೆಸಿಕೊಳ್ಳಬೇಕು. ನಿರ್ಧಾರ ತೆಗೆದುಕೊಳ್ಳುವ ಮೊದಲು ತಂದೆ-ತಾಯಿಯನ್ನು ನೆನಪಿಸಿಕೊಳ್ಳಬೇಕೆಂದು ಹೇಳಿದರು.

ವಿದ್ಯಾರ್ಥಿ ಜೀವನದಲ್ಲಿ ಸಾವಿರಾರು ದಾರಿಗಳಿದ್ದು ಪ್ರತಿಯೊಬ್ಬರು ತಮ್ಮ ಆಸಕ್ತಿ ದಾರಿಯನ್ನು ಆಯ್ಕೆ ಮಾಡಿಕೊಳ್ಳಬೇಕು. ಪ್ರತಿಯೊಂದು ವೃತ್ತಿಗೂ ಅದರದ್ದೆ ಆದ ಗೌರವವಿದ್ದು ಎಲ್ಲಾ ವೃತ್ತಿಗಳನ್ನು ಸಾಮಾನವಾಗಿ ಗೌರವಿಸುವ ಮನೋಭಾವನ್ನು ಬೆಳೆಸಿಕೊಳ್ಳಬೇಕು. ಗುರುಗಳ ಮಾರ್ಗದರ್ಶನ ಪಡೆದು ವಿದ್ಯಾರ್ಥಿಗಳ ಜೀವನ ಉನ್ನತ್ತ ಮಟ್ಟಕ್ಕೆ ಹೋಗಬೇಕು ಎಂದರು.


ರಾಜ್ಯ ಸ್ಪಂದನ ಸಿರಿವೇದಿಕೆ ಅಧ್ಯಕ್ಷೆ ಕಲಾವತಿ ಮಧುಸೂಧನ್ ಅವರು ಮಾತನಾಡಿ, ಮಕ್ಕಳಲ್ಲಿ ಸಾಮಾಜಿಕ ಮೌಲ್ಯಗಳನ್ನು ಬೆಳೆಸುವುದರಿಂದ ಉತ್ತಮ ಸಮಾಜ ನಿರ್ಮಾಣ ಮಾಡ ಬಹುದು. ಸಾಹಿತ್ಯ ಅಭಿರುಚಿ ಮಕ್ಕಳ ಮನಸ್ಸಿಗೆ ಸಂಸ್ಕಾರ, ಸೃಜನಶೀಲತೆ ಮತ್ತು ಮಾನ ವೀಯತೆಯ ಮೌಲ್ಯಗಳನ್ನು ತುಂಬುತ್ತದೆ. ಆತ್ಮಸ್ಥೈರ್ಯ ಹೊಂದಿದ ಮಕ್ಕಳು ಭವಿಷ್ಯದಲ್ಲಿ ಉತ್ತಮ ನಾಗರೀಕರರಾಗಿ ಬೆಳೆಯುತ್ತಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಿ.ಕೆ.ಮಂಜಯ್ಯ ಅವರು ಮಾತನಾಡಿ, ಕನ್ನಡದ ಚೋಮನ ದುಡಿ ಕಾದಂಬರಿ ಕೇವಲ ಒಬ್ಬ ವ್ಯಕ್ತಿಯ ಕಥೆಯಲ್ಲ ಸಮಾಜದಲ್ಲಿನ ಹಿಂದುಳಿದವರ ಬದುಕಿನ ನೈಜ್ಯ ಚಿತ್ರಣವಾಗಿದೆ. ಚೋಮನ ಜೀವನದ ಮೂಲಕ ಬಡತನ ಜಾತಿ ಸಮಸ್ಯೆಗಳನ್ನು ಲೇಖಕರು ಮನಮುಟ್ಟುವ ರೀತಿಯನ್ನು ಚಿತ್ರಿಸಿದ್ದಾರೆ. ಜೀವನದಲ್ಲಿ ಎಷ್ಟೇ ಕಷ್ಟಗಳು ಬಂದರೂ ಧೈರ್ಯ ಮತ್ತು ಆತ್ಮ ವಿಶ್ವಾಸವನ್ನು ಕಳೆದುಕೊಳ್ಳಬಾರದು. ಸ್ಪರ್ಧಾತ್ಮಕ ಪರಿಕ್ಷೇಗಳಲ್ಲಿ ಯಶಸ್ಸು ಸಾಧಿಸಲು ನಿರಂತರ ಓದು, ಪರಿಶ್ರಮ ಮತ್ತು ಸಮಯ ಅಗತ್ಯವೆ ಎಂದು ಹೇಳಿದರು.

ಕನ್ನಡ ವಿಭಾಗದ ಉಪನ್ಯಾಸಕರಾದ ಪೂರ್ಣಿಮ, ಕಾಂತರಾಜು ಇತರರು ಹಾಜರಿದ್ದರು.

# ಅಮೇರಿಕಾ ಡಾಲರ್ ಎದುರು ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಕುಸಿದ ರೂಪಾಯಿ ಮೌಲ್ಯ

• ಪ್ರಜೋದಯ ವರದಿ



**ಮುಂಬೈ:** ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಅಮೇರಿಕಾದ ಡಾಲರ್ ಎದುರು ರೂಪಾಯಿ ಮೌಲ್ಯವು 82 ಪೈಸೆಯಷ್ಟು ಕುಸಿದಿದ್ದು, ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಇಳಿದಿದೆ.

ವಹಿವಾಟಿನ ಅಂತ್ಯದ ವೇಳೆಗೆ ರೂಪಾಯಿ ಮೌಲ್ಯವು 95.31ಕ್ಕೆ ಇಳಿದಿದೆ. ಪಶ್ಚಿಮ ಏಷ್ಯಾ ಶಾಂತಿ ಪ್ರಸ್ತಾವನೆಗೆ ಇರಾನ್ ನೀಡಿದ ಪ್ರತಿಕ್ರಿಯೆಯನ್ನು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿರಸ್ಕರಿಸಿದ ಬೆನ್ನಲ್ಲೇ ಕಚ್ಚಾ ತೈಲ ಬೆಲೆ ಗಗನಕ್ಕೇರಿದೆ. ದೇಶದ ಷೇರುಪೇಟೆಯಿಂದ ವಿದೇಶಿ ಬಂಡವಾಳದ ಹೊರಹರಿವು, ಪಶ್ಚಿಮ ಏಷ್ಯಾ ಸಂಘರ್ಷದ ಅನಿಶ್ಚಿತತೆಯು ಹೂಡಿಕೆ ದಾರರ ಭಾವನೆ ಮೇಲೆ ಪರಿಣಾಮ ಬೀರಿದೆ. ಇವು ರೂಪಾಯಿ ಮೌಲ್ಯ ಇಳಿಕೆಗೆ ಕಾರಣವಾಗಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ನಾಗರಿಕರು ಚಿನ್ನ ಖರೀದಿಸುವುದನ್ನು ನಿಲ್ಲಿಸಬೇಕು ಮತ್ತು ಮಿತವ್ಯಯ ಕ್ರಮಗಳನ್ನು ಅನುಸರಿಸಬೇಕೆಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿರುವುದು ಷೇರು ಮಾರುಕಟ್ಟೆ ಮೇಲೆ ನಕಾರಾತ್ಮಕ ಪರಿಣಾಮ ಬೀರಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್1,312 ಅಂಶ ಇಳಿಕೆಯಾಗಿ, 76,015ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 360 ಅಂಶ ಕಡಿಮೆಯಾಗಿ, 23,815ಕ್ಕೆ ಕೊನೆಗೊಂಡಿದೆ. ಬ್ರೆಂಟ್ ಕಚ್ಚಾ ತೈಲ ದರ ಶೇಕಡ 2.52ರಷ್ಟು ಏರಿಕೆಯಾಗಿ ಪ್ರತಿ ಬ್ಯಾರೆಲ್‌ಗೆ 103.8 ಡಾಲರ್‌ಗೆ ತಲುಪಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK